KARC210023732021

Presented on : 24-08-2020
Registered on : 24-08-2020
Decided on : 18-06-2026
Duration : 05 years, 09 months, 25 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ದೇವದುರ್ಗ.**

**ಉಪಸ್ಥಿತರು ಃ ಶ್ರೀ ರಫೀಕ್ ಅಹಮದ್., ಬಿಎ., ಎಲ್.ಎಲ್.ಬಿ.,**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಕಾರಿಗಳು,**
**ದೇವದುರ್ಗ.**

**ಸಿ.ಸಿ.ನಂ ಃ 33/2021**

**ದಿನಾಂಕ 18 ನೇ ಜೂನ್ 2026.**

**ಪಿರ್ಯಾದಿದಾರರು** ಃ ರಾಜ್ಯ ಸರ್ಕಾರದ ಪರವಾಗಿ,
ಠಾಣಾ ಅಮಲ್ದಾರರು
ದೇವದುರ್ಗ. ಪೊಲೀಸ್ ಠಾಣೆ, ದೇವದುರ್ಗ.
(ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿತರು** ಃ
1. ನಿರಂಜನ್ @ ನಿರಂಜನ್ ಮೂರ್ತಿ ತಂದೆ ಪಾಂಡುರಂಗ,
28 ವರ್ಷ, ವಾಸಃ ಬಸವೇಶವರ ಓಣಿ,
ತಾ: ದೇವದುರ್ಗ, ಜಿಃ ರಾಯಚೂರು.
2. ವಿರುಪಾಕ್ಷಿ ತಂದೆ ವಿಟ್ಟಲ, 28 ವರ್ಷ,
ವಾಸಃ ಅಂಬಭವಾನಿ ದೇವಸ್ಥಾನ,
ತಾ: ದೇವದುರ್ಗ, ಜಿಃ ರಾಯಚೂರು.

(ಶ್ರೀ ಪಿ.ಟಿ.ಎನ್., ವಕೀಲರು)

| | |
|---|---|
| ಅಪರಾಧವು ಘಟಿಸಿದ ದಿನಾಂಕ | ಃ 24-08-2020 |
| ಆರೋ ಪಿತರು ಹಾಜರಾತಿಯ ದಿನಾಂಕ | ಃ 13-06-2022 |
| ಫಿರ್ಯಾದುದಾರರ ಹೆಸರು | ಃ ಸತೋಷರಾಣಿ |
| ಸಾಕ್ಷಿ ವಿಚಾರಣೆಯನ್ನು ಪ್ರಾರಂಭಿಸಿದ ದಿನಾಂಕ | ಃ 25-09-2024 |
| ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿದ ದಿನಾಂಕ | ಃ 21-04-2026 |
| ಆರೋಪಿತರು ವಿರುದ್ಧ ಹೊರಿಸಿದ ಆರೋಪಗಳು | ಃ ಭಾರತೀಯ ದಂಡ ಸಂಹಿತೆ ಕಲಂ 353, 186, 269 ಸಹವಾಚಕ 34. |

| | |
|---|---|
| **ನ್ಯಾಯಾಲಯದ ತೀರ್ಮಾನ** | ಃ ಆರೋಪಿತರು ಬಿಡುಗಡೆಗೊಂಡಿರುತ್ತಾರೆ. |
| ಪಿರ್ಯಾದಿ ಪರ ಪ್ರತಿನಿಧಿಸಿದವರು | ಃ ಸರ್ಕಾರಿ ಅಭಿಯೋಜಕರು |
| ಆರೋಪಿತರ ಪರ ಪ್ರತಿನಿಧಿಸಿದವರು | ಃ ಶ್ರೀ ಪಿ.ಟಿ.ಎನ್., ವಕೀಲರು |

**ಃಃ ತೀರ್ಪು ಃಃ**

ಪೊಲೀಸ್ ಉಪನಿರೀಕ್ಷಕರು ದೇವದುರ್ಗ ಪೊಲೀಸ್ ಠಾಣೆ, ದೇವದುರ್ಗ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 353, 186, 269 ಸಹವಾಚಕ 34 ರೀತ್ಯಾ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ-**

ದೇವದುರ್ಗ ಠಾಣಾ ವ್ಯಾಪ್ತಿಯಲ್ಲಿ ಬರುವ ದೇವದುರ್ಗ ಪಟ್ಟಣದಲ್ಲಿ, ದಿನಾಂಕ 24-08-2020 ರಂದು ಸಾಕ್ಷಿ ನಂ.1 ನೇದ್ದವರು, ಸಾಕ್ಷಿ ನಂ.7 ಮತ್ತು ಸಾಕ್ಷಿ ನಂ.8 ನೇದ್ದವರೊಂದಿಗೆ ಸರ್ಕಾರಿ ಜೀಪ್ ನಂಬರ ಕೆಎ-36 ಜಿ-0462 ನೇದ್ದರಲ್ಲಿ ಸಂಚರಿಸುತ್ತಾ ರಾತ್ರಿ 7-45 ಗಂಟೆ ಸುಮಾರಿಗೆ ದೇವದುರ್ಗದ ಅಯ್ಯಪ್ಪ ದವಾಖಾನೆಯ ಎದುರುಗಡೆ ಗಣೇಶ ವಿಗ್ರಹ ಕೂಡಿಸಿದ ಸ್ಥಳಕ್ಕೆ ಬಂದಿದ್ದು, ಅಲ್ಲಿ ಯಾವುದೇ ಸಮಾಜಿಕ ಅಂತರ ಕಾಯ್ದುಕೊಳ್ಳದೇ, ಮಾಸ್ಕ ಧರಿಸದೇ, ಕೊರೊನಾ ರೋಗದ ಸಂಬಂದ ನಿರ್ಲಕ್ಷ್ಯ ವಹಿಸಿದ್ದು ಕಂಡುಬಂದಿದ್ದಲ್ಲದೇ ಎರಡು ದೊಡ್ಡ ಸ್ಪೀಕರಗಳನ್ನು ಹೆಚ್ಚು ಶಬ್ದ ಬರುವ ಹಾಗೆ ಹಚ್ಚಿದ್ದರಿಂದ ಸಾಕ್ಷಿ ನಂ.1 ನೇದ್ದವರು ಅಲ್ಲಿದ್ದ ಆರೋಪಿತನಿಗೆ ಈ ರೀತಿಯಾಗಿ ಗಣೇಶ ಹಬ್ಬವನ್ನು ಆಚರಣೆ ಮಾಡುವುದು ಸರಿಯಲಾ ಸ್ಪೀಕರ್ ತೆಗೆಯಿರಿ ಅಂತಾ ಅಂದಿದ್ದಕ್ಕೆ ಆರೋಪಿತನು ಸ್ಪೀಕರ್ ತಗೆಯುವುದಿಲಾ್ಲ ಬರಿ ಹಿಂದೂ ಗಣೇಶ ಉತ್ಸವದಲ್ಲಿ, ಬಳಸುವ ಸ್ಪೀಕರ್ ಕಣ್ಣಿಗೆ ಕಾಣಿಸುತ್ತದೆ. ನೀವು ನಮ್ಮ ಮೇಲೆ ದೌರ್ಜನ್ಯ ಮಾಡುತ್ತಿದೀರಿ ಅಂತಾ ಮಾತನಾಡಿ, ನಿಮಗೇನು ದೇವದುರ್ಗ ಬರೆದುಕೊಟ್ಟಿದ್ದಾರಾ ನಿವೇನು ಪಿ.ಎಸ್.ಐ ಇದ್ದೀರಾ ನಿವೇನು ದೇವದುರ್ಗದ ಡಿಸಿ ನಾ ಅಂತಾ ಅಂದಾಡಿ ಸ್ಪೀಕರಗಳನ್ನು ತೆಗದುಕೊಂಡು ಹೋಗಲು ತಯಾರಾದಾಗ, ಸಾಕ್ಷಿ ನಂ.1 ನೇದ್ದವರು ಸ್ಪೀಕರ್ ಕೊಡಿ ಅಂತಾ ತೆಗೆದುಕೊಳ್ಳಲು ಹೋದಾಗ, ಆರೋಪಿತನು ಸಾಕ್ಷಿ ನಂ.1 ನೇದ್ದವರನ್ನು ತಳ್ಳಿ, ಸ್ಪೀಕರಗಳನ್ನು ಬೈಕ್ ಮೇಲೇರಿಸಿ ಕಳುಹಿಸಿಕೊಟ್ಟಿದ್ದು. ಆರೋಪಿತನು ಕೊರೋನಾ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ತಿಳಿದಿದ್ದರೂ ನಿರ್ಲಕ್ಷತನ ತೋರಿ, ಸಾಕ್ಷಿ ನಂ.1 ನೇದ್ದವರನ್ನು ದಬ್ಬಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಪಡಿಸಿದ್ದು, ಆರೋಪಿ ನಂ.2 ನೇದ್ದವನೂ ಸಹ

ಕೊರೊನಾ ವೈರಸ್ ಸಂಬಂದ ಸರ್ಕಾರ ಹೊರಡಿಸಿದ ಆದೇಶವನ್ನು ಉಲ್ಲಂಘಿಸಿ, ಕೊರೊನಾ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಯಾವುದೇ ಸಾಮಾಜೀಕ ಅಂತರ ಕಾಯ್ದುಕೊಳ್ಳದೆ ಮಾಸ್ಕ ಧರಿಸದೇ ನಿರ್ಲಕ್ಷನ ತೋರಿ ಸಾಕ್ಷಿ ನಂ1 ನೇದ್ದವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು ಎಂದು ಚಾಸಾ.1 ರವರು ಲಿಖಿತ ದೂರನ್ನು ಸಲ್ಲಿಸಿದ್ದು ಸದರಿ ದೂರಿನ ಆಧಾರದ ಮೇಲೆ ದೇವದುರ್ಗ ಪೊಲೀಸರು ತಮ್ಮ ಠಾಣಾ ಮೊ.ನಂ.142/2020 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 353, 186, 269 ಸಹವಾಚಕ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾಧಿಕಾರಿಯು ತನಿಖೆ ಪೂರೈಸಿ ಆರೋಪಿತರ ವಿರುದ್ದ ಮೇಲ್ಕಂಡ ಕಲಂ ಗಳ ಅನ್ವಯ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಸಲ್ಲಿಸಿರುವ ದೋಷಾರೋಪಣ ಪತ್ರ ಮತ್ತು ಅಭಿಯೋಜನೆಯ ದಾಖಲೆಗಳನ್ನು ಪರಿಶೀಲಿಸಿ ಭಾರತೀಯ ದಂಡ ಸಂಹಿತೆ ಕಲಂ 353, 186, 269 ಸಹವಾಚಕ 34 ರಡಿಯಲ್ಲಿ ಎಸಗಿದ ಅಪರಾಧಗಳಿಗೆ ಸಂಜ್ಞೇಯತೆ ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಸಮನ್ಸ್ ನ ಅನ್ವಯ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯ ಸಂಹಿತೆಯ ಕಲಂ 207 ರಡಿಯಲ್ಲಿ ಆರೋಪಿತರಿಗೆ ಅಭಿಯೋಜನೆಯ ಕಾಗದ ಪತ್ರಗಳನ್ನು ನೀಡಲಾಯಿತು. ಆರೋಪಿತರಿಗೆ ಅವರ ಮೇಲಿನ ದೋಷಾರೋಪಣೆಗಳನ್ನು ರಚಿಸಿ ಓದಿ ಹೇಳಲಾಯಿತು. ಆರೋಪಿತರು ತಾವು ಏನು ತಪ್ಪು ಮಾಡಿಲ್ಲವೆಂದು ಹಾಗೂ ಪ್ರತಿರಕ್ಷೆ ಇದೆ ಎಂದು ಹೇಳಿ ವಿಚಾರಣೆ ಬಯಸಿರುತ್ತಾನೆ. ಆದ್ದರಿಂದ ಅಭಿಯೋಜನೆಗೆ ಆರೋಪಿತರ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಅವಕಾಶ ನೀಡಲಾಯಿತು.

**4.** ಅಭಿಯೋಜನೆಯು ಆರೋಪಿತರ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಸಾಕ್ಷಿದಾರಾದ ಪ್ರಾಸಾ-1 ರಿಂದ ಪ್ರಾಸಾ-8 ಎಂದು ಹಾಗೂ ನಿಪಿ-1 ರಿಂದ 9 ದಾಖಲೆಗಳನ್ನು ಹಾಗೂ ಮುಮಾ-1 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತನ ಪರವಾಗಿ ಶ್ರೀ ಪಿ.ಟಿ.ಎನ್., ವಕೀಲರ ವಾದ ಕೇಳಿ ಕಡತದ ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಬಂದಿರುತ್ತವೆ.

**6.** ಉಭಯ ಪಕ್ಷಗಳ ವಾದ ವಿವಾದಗಳನ್ನು ಕೇಳಲಾಗಿ ನನ್ನ ವಿವೇಚನೆಗೆ ಈ ಕೆಳಕಂಡಂತೆ ಅಂಶಗಳು ಉದ್ಭವಿಸುತ್ತವೆ.

**// ಅಂಶಗಳು //**

**ಅಂಶ ನಂ.1** ಃ- ದಿನಾಂಕ 24.08.2020 ರಂದು ದೇವದುರ್ಗ ಪೋಲೀಸ್ ಠಾಣೆಯಲ್ಲಿ ಬರುವ ದೇವದುರ್ಗ ಪಟ್ಟಣದಲ್ಲಿ ಸಾಕ್ಷಿ 1 ರವರು ಸಾಕ್ಷಿ 7 ಮತ್ತು 8 ರವರೊಂದಿಗೆ ಸರ್ಕಾರಿ ಜೀಪ್ ನಂ.ಕೆಎ-36/ಜಿ-0462 ರಲ್ಲಿ ಸಂಚರಿಸುತ್ತಾ ರಾಃ 7.45 ಗಂಟೆಗೆ ದೇವದುರ್ಗ ಅಯ್ಯಪ್ಪ ದವಾಖಾನೆಯ ಎದುರುಗಡೆ ಗಣೇಶ ವಿಗ್ರಹ ಕೂಡಿಸಿದ ಸ್ಥಳಕ್ಕೆ ಬಂದಿದ್ದು, ಅಲ್ಲಿ ಯಾವುದೇ ಸಾಮಾಜಿಕ ಹಂತರ ಕಾಯ್ದುಕೊಳ್ಳದೇ ಮಾಸ್ಕ ಧರಿಸದೇ ಕೊರೋನಾ ರೋಗದ ಸಂಬಂದ ನಿರ್ಲಕ್ಷ್ಯ ವಹಿಸಿದ್ದು ಕಂಡುಬಂದಿದಲ್ಲದೇ ಎರಡು ದೊಡ್ಡ ಸ್ಪೀಕರಗಳನ್ನು ಹೆಚ್ಚು ಶಬ್ದ ಬರುವ ಹಾಗೆ ಹಚ್ಚಿದ್ದರಿಂದ ಸಾಕ್ಷಿ 1 ರವರಿಗೆ ಅಲ್ಲಿದ್ದ ಆರೋಪಿತನಿಗೆ ಸ್ಪೀಕರ್ ತೆಗೆಯಿರಿ ಅಂತಾ ಅಂದಿದ್ದಕ್ಕೆ ಆರೋಪಿತನು ಸ್ಪೀಕರ್ ತೆಗೆಯುವುದಿಲ್ಲ ಬರಿ ಹಿಂದೂ ಗಣೇಶ ಉತ್ಸವದಲ್ಲಿ ಬಳಸುವ ಸ್ಪೀಕರ್ ಕಣ್ಣಿಗೆ ಕಾಣಿಸುತ್ತದೆ ನೀವು ನಮ್ಮ ಮೇಲೆ ದೌರ್ಜನ್ಯ ಮಾಡುತ್ತಿದ್ದೀರಾ ಅಂತಾ ಮಾತನಾಡಿ ನಿಮಗೇನು ದೇವದುರ್ಗ ಬರೆದುಕೊಟ್ಟಿದ್ದಾರಾ? ನೀವೇನು ಪಿ ಎಸ್ ಐ ಇದ್ದೀರಾ ನೀವೇನು ದೇವದುರ್ಗ ಡಿಸಿ ನಾ ಅಂತಾ ಅಂದು ಸ್ಪೀಕರಗಳನ್ನು ತೆಗೆದುಕೊಂಡು ಹೋಗಲು ತಾಯಾರಾದಾಗ ಸಾಕ್ಷಿ 1 ರವರನ್ನು ತಳ್ಳಿ ಸ್ಪೀಕರ್ ಗಳನ್ನು ಬೈಕ್ ಮೇಲೇರಿಸಿ ಕಳುಹಿಸಿಕೊಟ್ಟು ಸಾಕ್ಷಿ 1 ರವರನ್ನು ದಬ್ಬಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಪಡಿಸಿದ್ದು. **ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ** 353 ಮತ್ತು 186 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ

ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ?

**ಅಂಶ ನಂ.2 ಃ-** ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು ಆರೋಪಿತನು ಕೊರೋನಾ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ತಿಳಿದಿದ್ದರೂ ನಿರ್ಲಕ್ಷತನ ತೋರಿದ್ದು 2 ನೇ ಆರೋಪಿತನೂ ಸಹ ಕೋರೋನಾ ವೈರಸ್ ಸಂಬಂದ ಸರ್ಕಾರ ಹೊರಡಿಸಿದ ಆದೇಶವನ್ನು ಉಲ್ಲಂಘಿಸಿ ಯಾವುದೇ ಸಾಮಾಜಿಕ ಅಂತರ ಕಾಯ್ದು ಕೊಳ್ಳದೇ ಮಾಸ್ಕ ಧರಿಸದೇ ನಿರ್ಲಕ್ಷ ತೋರಿದ್ದು. **ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ** 269 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವರೇ?

**ಅಂಶ ನಂ.3 ಃ-** ಯಾವ ಆದೇಶ**?**

**7.** ಮೇಲ್ಕಂಡ ಅಂಶಗಳನ್ನು ನಾನು ಈ ಕೆಳಕಂಡಂತೆ ಕಾಣಿಸಿರುವ ಕಾರಣಗಳಿಗಾಗಿ ಈ ರೀತಿ ಉತ್ತರಿಸುತ್ತೇನೆ.

ಅಂಶ **1 ಮತ್ತು 2** ಃ ನಕಾರಾತ್ಮಕವಾಗಿ

ಅಂಶ **3**ಃ ಅಂತಿಮ ಆದೇಶದ ಪ್ರಕಾರ ಈ ಕೆಳಕಂಡ

**// ಕಾರಣಗಳು //**

**8. ಅಂಶ ನಂ.1 ಮತ್ತು 2ಃ** ಅಭಿಯೋಜನೆಯ ಪ್ರಕರಣದ ಸಾರಾಂಶವನ್ನು ಈ ತೀರ್ಪಿನ ಮೊದಲ ಹಂತದಲ್ಲೆ ನಮೂದಿಸಿದ್ದು ಮತ್ತೆ ಪುನರಾವರ್ತನೆಯನ್ನು ತಪ್ಪಿಸಲು ಈ ಹಂತದಲ್ಲಿ ನಮೂದಿಸಿರುವುದಿಲ್ಲ.

ಈ ಪ್ರಕರಣದಲ್ಲಿ ಮುಖ್ಯವಾಗಿ ಅಭಿಯೋಜನೆಯ ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸಬೆಕಾಗುತ್ತದೆ.

ಕಲಂ 353 ರ ರೀತ್ಯಾ ಆರೋಪ ರುಜುವಾತಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ಸಂಪೂರ್ಣವಾಗಿ ರುಜುವಾತು ಪಡಿಸಬೇಕಾಗುತ್ತದೆ.

ı. ಆಪಾದಿತನು ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಅಥವಾ ಆ ವ್ಯಕ್ತಿಯು ಅಂತಹ ಸಾರ್ವಜನಿಕ ಸೇವಕನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯುವ ಅಥವಾ ತಡೆಯುವ ಉದ್ದೇಶದಿಂದ ಅಥವಾ ಅಂತಹ ವ್ಯಕ್ತಿಯು ಅಂತಹ ಸಾರ್ವಜನಿಕ ಸೇವಕನಾಗಿ ತನ್ನ ಕರ್ತವ್ಯವನ್ನು ಕಾನೂನುಬದ್ಧವಾಗಿ ನಿರ್ವಹಿಸಲು ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಪರಿಣಾಮವಾಗಿ, ಯಾವುದೇ ವಿವರಣೆಯ ಪ್ರಕಾರ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ ಎಂಬ ಅಂಶವನ್ನು ರುಜುವಾತು ಪಡಿಸತಕ್ಕದ್ದು.

ಅದೇ ರೀತಿ ಭಾ.ದಂ.ಸಂ.ಕಲಂ.186 ರೀತ್ಯ ಆಪಾದಿತನು ಯಾವುದೇ ಸಾರ್ವಜನಿಕ ಸೇವಕನು ತನ್ನ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸ್ವಯಂಪ್ರೇರಣೆಯಿಂದ ಅಡ್ಡಿಪಡಿಸಿದರೆ, ಅವನಿಗೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಎರಡರಲ್ಲಿ ಒಂದು ರೀತಿಯ ಜೈಲು ಶಿಕ್ಷೆ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. ಎಂಬ ಅಂಶವನ್ನು ರುಜುವಾತು ಪಡಿಸತಕ್ಕದ್ದು.

ಅದೇ ರೀತಿ ಭಾ.ದಂ.ಸಂ.ಕಲಂ.269 ರೀತ್ಯ ಆಪಾದಿತನು ಯಾರಾದರೂ ಸ್ವಇಚ್ಛೆಯಿಂದ ನೋವುಂಟುಮಾಡಿದರೆ, ಅವನು ಉಂಟುಮಾಡಲು ಉದ್ದೇಶಿಸಿರುವ ಅಥವಾ ತಾನು ಉಂಟುಮಾಡುವ ಸಾಧ್ಯತೆ ಇದೆ ಎಂದು ತಿಳಿದಿದ್ದರೆ ಅದು ಗಂಭೀರವಾದ ನೋವು ಆಗಿದ್ದರೆ ಮತ್ತು ಅವನು ಉಂಟುಮಾಡುವ ನೋವು ತೀವ್ರವಾದ ನೋವು ಮಾಡಿದ್ದನು ಎಂಬ ಅಂಶವನ್ನು ರುಜುವಾತು ಪಡಿಸತಕ್ಕದ್ದು.

**9.** ಅಭಿಯೋಜನೆಯು ಸದ್ರಿ ಪ್ರಕರಣವನ್ನು ರುಜುವಾತು ಪಡಿಸಲು ಮೊದಲಿಗೆ ಈ ಪ್ರಕರಣದ ಪಂಚಸಾಕ್ಷಿದಾರರಾದ ಚಾಸಾ-2 ವೀರೇಶ ಬಾಬು ಕಂದಾಯ ನಿರೀಕ್ಷಕರವರನ್ನು ಪ್ರಾಸಾ-1 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು 2019 ರಿಂದ ಡಿಸೆಂಬರ್ 2020 ರವರೆಗೆ ದೇವದುರ್ಗದ ಕಂದಾಯ ಕಛೇರಿಯಲ್ಲಿ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡಿದ್ದು. ಚಾಸಾ-1 ತಹಶೀಲ್ದಾರರು ತನಗೆ ಪರಿಚಯ ಇದ್ದು. ಸಾಕ್ಷಿಯು ಮಹಜರನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು. 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಜಡ್.ಪಿ ಸರ್ಕಲ್‌ನಿಂದ ತಹಶೀಲ್ದಾರ ಕಚೇರಿಗೆ ಹೋಗುವ ರಸ್ತೆಯಲ್ಲಿ ಶೆಡ್ ಮಾಡಿ ಗಣೇಶನ ವಿಗ್ರಹ ಇಟ್ಟಿದ್ದು. ಆ ಸಮಯದಲ್ಲಿ ಮಹಜರ ಮಾಡಿದ್ದು. ಆಗ ಚಾಸಾ-1, 3

ಮತ್ತು 7 ರವರು ಇದ್ದು. ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇದ್ದು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಈ ಬಗ್ಗೆ ಚಾಸಾ-1 ರವರು ಅವರಿಗೆ ಹೇಳಿದರು ಮತ್ತು ಪಿ.ಎಸ್.ಐ ರವರಿಗೆ ಫೋನ್ ಮಾಡಿದ್ದು. ಸ್ಪೀಕರನ್ನು ತೆಗೆದುಕೊಂಡು ಹೋಗುತ್ತಿದ್ದರು, ಆಗ ಚಾಸಾ-1 ರವರು ಸ್ಪೀಕರನ್ನು ಸೀಜ್ ಮಾಡುತ್ತೇವೆ ಪೋಲಿಸರು ಬಂದಾಗ ತೆಗೆದುಕೊಂಡು ಹೋಗಿ ಎಂದು ಹೇಳಿದ್ದು. ಆಗ ನಿರಂಜನ ಮತ್ತು ಆತನ ಸ್ನೇಹಿತರು ಚಾಸಾ-1 ರವರಿಗೆ ಅವಮಾನವಾಗುವ ರೀತಿಯಲ್ಲಿ ಮಾತನಾಡಿ ನೀವು ಡಿ.ಸಿ ನಾ ಪಿ.ಎಸ್.ಐ ಇದ್ದೀರಾ ಎಂದು ಮಾತನಾಡಿದ್ದು. ಸ್ಪೀಕರನ್ನು ಒಯ್ಯುವಾಗ ಚಾಸಾ-1 ರವರು ತಡೆದಾಗ ಆರೋಪಿತರು ಅವರನ್ನು ದಬ್ಬಾಡಿದ್ದು. ಆ ಸಮಯದಲ್ಲಿ ತಾವು ಅಲ್ಲಿ ಇದ್ದು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿದ್ದು. ಈ ಬಗ್ಗೆ ತಾನು ಪಂಚನಾಮೆಗೆ ಸಹಿ ಮಾಡಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**10.** ಪ್ರಾಸಾ.1 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 26-08-2020 ರಂದು ನಾನು ಚಾಸಾ-1 ರವರು ಜೀಪಿನಲ್ಲಿ ಹೋಗುತ್ತಿದ್ದೇವು. ನಾವು ಸ್ಥಳಕ್ಕೆ ಹೋದಾಗ ಬೆಳಿಗ್ಗೆ 10-45 ಗಂಟೆಯಾಗಿತ್ತು. ಘಟನೆ ಮುಗಿದ ಮೇಲೆ ಪೋಲಿಸರು ಬಂದಿದ್ದರು. ಘಟನೆ ದಿನಾಂಕ: 26-08-2020 ಕ್ಕೆ 1 ತಾಸಿನವರೆಗೆ ಆಗಿರುತ್ತದೆ. ಘಟನೆ ಮುಗಿದ ಮೇಲೆ ಚಾಸಾ-1 ರವರು ದೂರು ಕೊಟ್ಟು ಎಫ್ ಐ ಆರ್ ಮಾಡಿಸಿದರು ನಾನು ಅವರ ಜೊತೆ ಹೋಗಿರುತ್ತೇನೆ. ದೂರನ್ನು ತಹಶೀಲ್ ಕಚೇರಿಯಲ್ಲಿ ಟೈಪ್‌ಮಾಡಿಸಿದರು. ತಹಶೀಲ್ ಕಚೇರಿಯಲ್ಲಿಯೇ ಪೋಲಿಸರಿಗೆ ದೂರನ್ನು ಕೊಟ್ಟಿರುತ್ತೇವೆ. ದೂರು ಕೊಟ್ಟಾಗ ಎಷ್ಟು ಸಮಯ ಆಗಿತ್ತು ನನಗೆ ನೆನಪಿಲ್ಲ. ನಾನು ಪೋಲಿಸ್ ಠಾಣೆಗೆ ಹೊಗಿಲ್ಲ. ಚಾಸಾ-1 ರವರು ಪೋಲಿಸ್ ಠಾಣೆಗೆ ಹೋದ ಬಗ್ಗೆ ಗೊತ್ತಿಲ್ಲ. ನಿಪಿ-1 ಕ್ಕೆ ನಾನು ಮತ್ತು ಚಾಸಾ-3 ನು ಪೋಲಿಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. 26-08-2020 ಮದ್ಯಾಹ್ನಕ್ಕೆ ಪೋಲಿಸ್ ಠಾಣೆಗೆ ಹೋಗಿರುತ್ತೇನೆ ಸಮಯ ನನಗೆ ನೆನಪಿಲ್ಲ. ನಿ.ಪಿ-1 ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿದೆ. ನಾನು ಓದಿ ಪಂಚನಾಮೆಗೆ ಸಹಿ

ಮಾಡಿರುತ್ತೇನೆ. ದೂರು ದಾಖಲಾದ ಮೇಲೆ ನಾನು ಸ್ಥಳಕ್ಕೆ ಹೋಗಿಲ್ಲ. ಕೋವಿಡ್ -19 ಸಾಂಕ್ರಾಮಿಕ ರೋಗ ನಿಯಂತ್ರಣ ಮಾಡಲು ಸರಕಾರ ಹೊರಡಿಸಿದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಗಣೇಶ ಕೂಡಿಸಲು ಅನುಮತಿ ಪಡೆದಿರುವ ಬಗ್ಗೆ ನಿಗೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಆ ಸಮಯಲದಲ್ಲಿ ಕಂದಾಯ ನಿರೀಕ್ಷಕನಾಗಿದ್ದೇನು. ಘಟನಾ ಸ್ಥಳದಲ್ಲಿ ಛಾಯಾ ಚಿತ್ರ ತೆಗೆದ ಬಗ್ಗೆ ಮತ್ತು ವಿಡಿಯೋ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಪ್ರಭಾರಿ ತಹಶೀಲ್ದಾರ ಕರ್ತವ್ಯದಲ್ಲಿದ್ದರು. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರರು ಸುಳ್ಳು ದೂರು ಕೊಟ್ಟಿದ್ದಾರೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-3 ಮತ್ತು 7 ರವರು ಸ್ಪೀಕರನ್ನು ತೆಗೆಯಬಾರದು ಪೋಲಿಸರು ಬರುತ್ತಿದ್ದಾರೆ ಎಂದು ಹೇಳಿದ್ದಕ್ಕೆ ಅವರಿಗೆ ಆರೋಪಿತರು ದೊಬ್ಬಾಡಿರುತ್ತಾರೆ. ಆ ದಿನ ಆರೋಪಿತರು ಕೋವಿಡ್ 19 ನಿಯಮ ಪ್ರಕಾರ ಮಾಸ್ಕ ಧರಿಸಿರಲಿಲ್ಲ ಸಾಮಾಜಿಕ ಅಂತರ ಕಾಪಾಡಲಿಲ್ಲ ಎಂದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**11.** ಈ ಪ್ರಕರಣದ ಪಂಚಸಾಕ್ಷಿದಾರರಾದ ಚಾಸಾ-3 ದಂಡಪ್ಪ ಗ್ರಾಮ ಸಹಾಯಕ ರವರನ್ನು ಪ್ರಾಸಾ-2 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಸುಮಾರು 4 ವರ್ಷದಿಂದ ದೇವದುರ್ಗದ ಗ್ರಾಮ ಸಹಾಯಕ ಎಂದು ಕೆಲಸ ಮಾಡುತ್ತಿದ್ದೇನೆ. ಚಾಸಾ-1 ತಹಶೀಲ್ದಾರರು, ಚಾಸಾ-2 ಕಂದಾಯ ನಿರೀಕ್ಷಕರು. ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಏನಾಯಿತು ಎಂದು ತನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ತನಗೆ ಏನು ಮಾಹಿತಿ ಇಲ್ಲ. ಪೋಲಿಸರು ತನಗೆ ವಿಚಾರ ಮಾಡಿಲ್ಲ. ಸಾಕ್ಷಿಯು ಮಹಜರನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**12.** ಪ್ರಾಸಾ.2 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 24-08-2020 ರಮದು ದೂರುದಾರರು ಸರಕಾರಿ ಜೀಪನಲ್ಲಿ ಸಂಚರಿಸುತ್ತಿದ್ದಾಗ ರಾತ್ರಿ 7-45 ಗಂಟೆಗೆ ಅಯ್ಯಪ್ಪ ದವಖಾನೆ ಎದುರಗಡೆ ಗಣೇಶ ವಿಗ್ರಹ ಕೂಡಿಸಿದ ಸ್ಥಳಕ್ಕೆ ಬಂದಿದ್ದು, ಅಲ್ಲಿ ಯಾವುದೇ ಸಾಮಾಜಿಕ ಅಂತರ ಕಾಯಿದುಕೊಳ್ಳದೆ ಮಾಸ್ಕ್ ದರಿಸದೆ ಕರೋನಾ ರೋಗದ ಸಂಬಂಧ ನಿರ್ಲಕ್ಷ್ಯ ವಹಿಸಿದ್ದು ಕಂಡು ಬಂದಿತ್ತು ಎಂದರೆ ಸರಿಯಲ್ಲ. 2 ದೊಡ್ಡ ಸ್ಪೀಕರ್‌ಗಳನ್ನು ಹಚ್ಚಿ ಜೋರಾಗಿ ಧ್ವನಿಯನ್ನುದ ಮಾಡಿದರು ಎಂದರೆ ಸರಿಯಲ್ಲ. ಚಾಸಾ-1 ರವರು ಸ್ಪೀಕರನ್ನು ತೆಗೆಯಿರಿ ಎಂದು ಅಂದಿದ್ದಕ್ಕೆ ಆರೋಪಿತರು ಸ್ಪೀಕರನ್ನು ತೆಗೆಯುವುದಿಲ್ಲ ದೌರ್ಜನ್ಯ ಮಾಡುತ್ತಿದ್ದಿರಾ ಎಂದು ನಿಮಗೇನು ದೇವದುರ್ಗ ಬರೆದುಕೊಟ್ಟಿದ್ದಾರಾ ದೇವದುರ್ಗದ ಡಿ.ಸಿ ನಾ, ಪಿ.ಎಸ್.ಐ ಎಂದು ಬೈದಿದ್ದರು ಎಂದರೆ ಸರಿಯಲ್ಲ. ಸ್ಪೀಕರನ್ನು ತೆಗೆಯಲು ಹೋದಾಗ ದಬ್ಬಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ಪಮಚನಾಮೆ ಮಾಡಿದ್ದು ನಾನು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಪಂಚನಾಮೆ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ಎಂದು ಪಂಚನಾಮೆಯ ಅಂಶಗಳ ಬಗ್ಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**13.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-5 ಸಂತೋಷ ಪೋಲಿಸ್ ಪೇದೆ ನಂ.118 ರವರನ್ನು ಪ್ರಾಸಾ-3 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರು ದೇವದುರ್ಗ ತಹಶೀಲ್ದಾರರು ಆಗಿದ್ದು. ದಿನಾಂಕ: 24-08-2020 ರಂದು ತಾನು ಪೋಲಿಸ್ ಠಾಣೆಯಲ್ಲಿ ಗಣಕಯಂತ್ರದಲ್ಲಿ ಪೋಲಿಸ್ ಐ.ಟಿ ಕರ್ತವ್ಯ ನಿರ್ವಹಿಸುತ್ತಿದ್ದು. ಚಾಸಾ-6 ರವರು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದರು. ತನ್ನ ಹತ್ತಿರ ಬಂದು ಪಿ.ಎಸ್.ಐ ರವರು ತನಗೆ ಪೋನ್ ಮಾಡಿ ದೇವದುರ್ಗದ ತಹಶೀಲ್ದಾರರಾದ ಚಾಸಾ-1 ರವರು ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ನೀನು ಹೋಗಿ ಸ್ಪೀಕರ್ ತೆಗೆದುಕೊಂಡು ಬಾ ಅಂತಾ ತಿಳಿಸಿದ್ದು, ಆದ ಕಾರಣ ತನ್ನ ಜೊತೆ ನೀನು ಬಾ ಅಂತಾ ತಿಳಿಸಿದ್ದರಿಂದ, ತಾನು ಅವರೊಂದಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಘಟನಾ ಸ್ಥಳಕ್ಕೆ ಹೋಗಿದ್ದು. ಆ

ಸಮಯದಲ್ಲಿ ಚಾಸಾ-1 ಮತ್ತು 7 ರವರು ಇದ್ದರು. ಆ ಸಮಯದಲ್ಲಿ ಅಲ್ಲಿ 1 ನೇ ಆರೋಪಿ ಇದ್ದನು. ಇತನು ತನಗೆ ಚಾಸಾ-1 ರವರು ಹೊಸದಾಗಿ ಬಂದ ಪಿ.ಎಸ್.ಐ ಅಂತಾ ಅಂದನು, ಆಗ ತಾನು ಹಾಗೂ ಚಾಸಾ-6 ರವರು ಸೇರಿಕೊಂಡು ಸ್ಪೀಕರ್ ಕೊಡಿ ಅಂತಾ ಕೇಳಿದಾಗ, ಚಾಸಾ-1 ರವರು ತಮಗೆ ತಿಳಿಸಿದ್ದು ಎಂದು ತಾನು 1 ನೇ ಆರೋಪಿಗೆ ಹೇಳಿದಾಗ, ನಿಮ್ಮ ಪಿ.ಎಸ್.ಐ ರವರಿಗೆ ಪೋನ್ ಮಾಡಿ ಸ್ಪೀಕರ್ ತೆಗೆದುಕೊಂಡು ಹೋಗಲು ತಿಳಿಸಿದಾಗ, 1 ನೇ ಆರೋಪಿ ಸ್ಪೀಕರ್ ತೆಗೆದುಕೊಂಡು ಹೋಗಲು ತಯಾರಾದಾಗ ತಾನು ಸ್ಪೀಕರ್ ಕೊಡಿ ಎಂದು ತೆಗೆದುಕೊಳ್ಳಲು ಹೋದಾಗ, 1 ನೇ ಆರೋಪಿ ತನ್ನನ್ನು ತಳ್ಳಿ, ಸ್ಪೀಕರಗಳನ್ನು ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟನು ಅಂತಾ ತಿಳಿಸಿದ್ದು. ನಂತರ ತಹಶೀಲ್ದಾರರಾದ ಚಾಸಾ-1 ರವರು ತಮ್ಮ ಸಿಬ್ಬಂದಿಯವರೊಂದಿಗೆ ಜೀಪನಲ್ಲಿ ಕುಳಿತುಕೊಂಡು ಹೋದರು. ನಂತರ ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟ 02 ಸ್ಪೀಕರ್ ಗಳನ್ನು ಸುತ್ತ ಮುತ್ತ ಹುಡುಕಲಾಗಿ ಜನೌಷಧಿ ಅಂಗಡಿ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ 02 ಸ್ಪೀಕರಗಳನ್ನು ಇಟ್ಟಿರುವುದನ್ನು ಒಂದು ಖಾಸಗಿ ಆಟೋದಲ್ಲಿ ಹಾಕಿಕೊಂಡು ಠಾಣೆ ಮುಂದೆ ಹಾಜರುಪಡಿಸಿದ್ದು. ಸ್ಥಳದಲ್ಲಿ 1 ನೇ ಆರೋಪಿಯೊಂದಿಗೆ 2 ನೇ ಆರೋಪಿ ಇದ್ದನು. ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇತ್ತು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅಲ್ಲದೆ ತಹಶೀಲ್ದಾರರ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿದ್ದು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದು. ಮುದ್ದೆ ಮಾಲು ಸ್ಪೀಕರ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**14.** ಪ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಚಾಸಾ-6 ರವರು ನನಗೆ ಮಾಹಿತಿ ತಿಳಿಸಿದಾಗ ಸಮಯ ಸಂಜೆ 7-45 ಗಂಟೆಯಾಗಿತ್ತು. ನಾನು ಮತ್ತು ಚಾಸಾ-6

ರವರು ಮೋಟಾರ್ ಸೈಕಲ್ ಮೇಲೆ ಹೋಗಿದ್ದು ಆ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳವು ಯಾವ ವಾರ್ಡ್ ನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಅದು ಅಯ್ಯಪ್ಪ ದವಾಖಾನೆ ಎದುರುಗಡೆ ಇರುತ್ತದೆ. ನಾವು ಸ್ಥಳಕ್ಕೆ ಹೋದಾಗ ಸಮಯ 7-50 ರಿಂದ 7-55 ಗಂಟೆಯಾಗಿತ್ತು. ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-1, 4, 7 ಮತ್ತು 8 ರವರು ಇದ್ದರು. ಇವರನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳ ಯಾರಿಗೆ ಸೇರಿದ್ದು ಎಂದು ನನಗೆ ನೆನಪಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಲು ಪರವಾನಿಗೆ ಪಡೆದುಕೊಂಡಿದ್ದರು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಸ್ಪೀಕರ್ ಗಳು ಇರಲಿಲ್ಲ. ಸ್ಥಳದಲ್ಲಿ ಸ್ಪೀಕರ್ ಹಚ್ಚಿದ ಬಗ್ಗೆ ಪೋಟೋವಾಗಲಿ ವಿಡಿಯೋವಾಗಲಿ ನಾನು ನೋಡಿರುವುದಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾನೆಯಾದ ಸ್ಥಳದಲ್ಲಿ ಬೆಳಿಗ್ಗೆ ಮತ್ತು ಸಂಜೆ ಪೂಜೆ ಮಾಡುವ ಬಗ್ಗೆ ಮತ್ತು ಜನರ ದರ್ಶನ್ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದ ಸಮಯದಲ್ಲಿ ಯಾರು ಜನರು ಇರಲಿಲ್ಲ. ಸ್ಥಳದಿಂದ ಸ್ಪೀಕರಗಳನ್ನು ಯಾರು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ಜನೌಷಧಿ ಅಂಗಡಿ ಮುಂದೆ 2 ಸ್ಪೀಕರಗಳು ಇದ್ದವು. ಅವುಗಳನ್ನು ನಾವೆ ಹುಡುಕಿರುತ್ತೇವೆ. ಸ್ಥಳದಿಂದ ಜನೌಷಧಿ ಕೇಂದ್ರ ಸುಮಾರು 100 ಮೀಟರನಷ್ಟು ದೂರು ಇರುತ್ತದೆ. ನಾವು ಹೋದಾಗ ಚಾಸಾ-1 ರವರಿಗೆ ಆರೋಪಿತರು ತಳ್ಳಾಡಿ ಅವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಜನೌಷಧಿ ಅಂಗಡಿಯ ಮುಂದೆ ಇದ್ದ ಸ್ಪೀಕರ್ ಗಳ ನಂಬರ್ ಮತ್ತು ಅವು ಯಾವ ಕಂಪನಿಯವು ಎಂದು ನನಗೆ ಹೇಳಲು ಬರುವುದಿಲ್ಲ. ಸ್ಪೀಕರ್ ಇದ್ದ ಸ್ಥಳದ ಪೋಟೋವನ್ನು ತೆಗೆದಿರುವುದಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳದ ಚಕ್ ಬಂದಿ ನನಗೆ ಹೇಳಲು ಬರುತ್ತದೆ. ಅಲ್ಲಿ ಖಾಲಿ ಜಾಗ ಇತ್ತು. ಉತ್ತರ ದಿಕ್ಕಿಗೆ ರಸ್ತೆ ಇರುತ್ತದೆ. ತಹಶೀಲ್ದಾರರವರು ಸ್ಪೀಕರಗಳನ್ನು ತೆಗೆದುಕೊಂಡು ಹೋಗಿ ಎಂದು ಪಿ ಎಸ್ ಐ ರವರಿಗೆ ಹೇಳಿದ ಮೇಲೆ ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಆದರೆ ಅವರನ್ನು ವಿಚಾರಣೆ ಮಾಡಿರುತ್ತೇನೆ. ಜನೌಷಧಿ ಅಂಗಡಿಯ ಮುಂದೆ ಸ್ಪೀಕರ್ ಗಳು ಸಿಕ್ಕಾಗ, ಚಾಸಾ-1 ರವರು ನಮಗೆ ಹೇಳಿ ಹೋಗಿರುತ್ತಾರೆ. ಸ್ಥಳದಲ್ಲಿ ಇರಲಿಲ್ಲ ನಮಗೆ ಹೇಳಿ ಹೋಗಿರುತ್ತಾರೆ. ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ ಲಾಕ್ ಡೌನ್ ಇತ್ತು ಎಂದು ನನಗೆ ಹೇಳಲು ಬರಲು ಬರುವುದಿಲ್ಲ. ನಮ್ಮ ಠಾಣೆಗೆ ಸಾರ್ವಜನಿಕರು ಸ್ಪೀಕರ್ ನಲ್ಲಿ ಧ್ವನಿ

ಹೆಚ್ಚಾಗಿರುವ ಬಗ್ಗೆ ಯಾರು ದೂರು ಕೊಟ್ಟಿರುವುದಿಲ್ಲ. ಲಾಕ್ ಡೌನ್ ನಿಯಮವಾಳಿಗಳು ಪಾಲನೆ ಮಾಡಿರುವುದಿಲ್ಲ ಆರೋಪಿತರು ಮೌಖಿಕವಾಗಿ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದೇ ಸಿಟ್ಟನ್ನು ಇಟ್ಟುಕೊಂಡು ಚಾಸಾ-1 ರವರು ಆರೋಪಿತರ ವಿರುದ್ದ ಸುಳ್ಳು ದೂರು ಕೊಟ್ಟಿದ್ದಾರೆಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆಮಾಲಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-7 ಪ್ರಕಾಶ ಗೌಡ ಗ್ರಾಮ ಲೆಕ್ಕಧಿಕಾರಿಯವರನ್ನು ಪ್ರಾಸಾ-4 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರು ದೇವದುರ್ಗ ತಹಶೀಲ್ದಾರರು ಆಗಿದ್ದು. ದಿನಾಂಕ: 24-08-2020 ರಂದು ಚಾಸಾ-1 ರವರೊಂದಿಗೆ ತಾನು, ಜೀಪ್ ಚಾಲಕ ಬಶೀರ ರವರು ಸಂಚರಿಸುತ್ತಿದ್ದಾಗ, ಸಂಜೆ 7-45 ಗಂಟೆಗೆ ಅಯ್ಯಪ್ಪ ದವಾಖಾನೆ ಎದುರುಗಡೆ ಹೋದಾಗ, ನಿರಂಜನ ಎನ್ನುವಾತ ಗಣೇಶ ಮೂರ್ತಿಯನ್ನು ಪ್ರಷ್ಠಾಪಿಸಿದ್ದು, ಅಲ್ಲಿ ಸ್ಪೀಕರಗಳನ್ನು ಇಟ್ಟುಕೊಂಡಿದ್ದು, ಆ ಸಮಯದಲ್ಲಿ ಕೋವಿಡ್ -19 ನಿಯಮಾವಳಿಗಳು ಜಾರಿಯಲ್ಲಿದ್ದು, ಅದನ್ನು ಪಾಲಿಸಿದೇ ಉಲ್ಲಂಘನೆ ಮಾಡಿದ್ದು, ಆಗ ಚಾಸಾ-1 ರವರು ಸ್ಪೀಕರಗಳನ್ನು ಹಾಕಬೇಡಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದು, ಆಗ ಆರೋಪಿ ತಾವು ಹಿಂದೂ ಗಣೇಶವನ್ನು ಇಟ್ಟಿದ್ದು, ಎಲ್ಲಾ ಕಡೆ ಹಾಕುತ್ತಾರೆ. ತಾವು ಏಕೆ ಹಾಕಬಾರದೆಂದು ಚಾಸಾ-1 ರವರಿಗೆ ಹೇಳಿದ್ದು. ಆಗ ಚಾಸಾ-1 ರವರು ಸೌಂಡ್ ಬಾಕ್ಸ್‌ಗಳನ್ನು ಜೀಪಿಗೆ ಹಾಕಿ ಎಂದು ಹೇಳಿದ್ದು, ಆರೋಪಿತರು ತಾವೇ ತೆಗೆದುಕೊಂಡು ಹೋಗಿರುತ್ತೇವೆ ಎಂದು ಹೇಳಿ ಗಾಡಿಯನಲ್ಲಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿದ್ದು. ಚಾಸಾ-1 ರವರು ಪಿ.ಎಸ್.ಐ ರವರಿಗೆ ಫೋನ್ ಮಾಡಿ ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ಆ ಸಮಯದಲ್ಲಿ ಪಿ.ಎಸ್.ಐ ಮತ್ತು ಇಬ್ಬರು ಪೋಲಿಸರು ಸ್ಥಳಕ್ಕೆ ಬಂದಿದ್ದು. ಸೌಂಡ್ ಬಾಕ್ಸ್‌ಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿದ್ದು. ಆರೋಪಿತರು ಕೃತ್ಯದಿಂದ ತಹಶೀಲ್ದಾರರ ಚಾಸಾ-1 ರವರ

ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿದ್ದು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದು. ಇನ್ನೊಬ್ಬ ಆರೋಪಿಯ ಹೆಸರು ತನಗೆ ಗೊತ್ತಿರುವುದಿಲ್ಲ. ಮುದ್ದೆ ಮಾಲು ಸ್ಪೀಕರ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**16.** ಪ್ರಾಸಾ.4 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಆರೋಪಿತರು ತನ್ನ ಗೆಳೆಯನಿಗೆ ವಿಡಿಯೋ ಮಾಡು ತಹಶೀಲ್ದಾರ ನಮಗೆ ಹೇಗೆ ತಳ್ಳುತ್ತಿದ್ದಾರೆ, ಅವರೇನು ಪಿ ಎಸ್ ಐ ಇದ್ದಾರಾ ಎಂದು ಹೇಳಿದರು ಎಂದರೆ ಸರಿ. ನಂತರ ಚಾಸಾ-1 ರವರಿಗೆ ನೀವೇನು ಪಿ ಎಸ್ ಐ ಇದ್ದೀರಾ ಏನಿದೆ ಅದೇ ಕೆಲಸ ಮಾಡಿ ಬರಿ ಹಿಂದೂಗಳ ಮೇಲೆ ದೌರ್ಜನ್ಯ ಮಾಡುತ್ತೀರಾ ಸುಪ್ರಿಂ ಕೋರ್ಟ್ ಆದೇಶ ಇದೆ ಗೊತ್ತೇನು ನಿಮಗೇನು ದೇವದುರ್ಗ ಬರೆದುಕೊಟ್ಟಿದ್ದಾರಾ. ನೀವೇನು ದೇವದುರ್ಗ ಡಿ ಸಿ ನಾ ಎಂದು ಹೇಳಿರುತ್ತಾರೆಂದರೆ ಸರಿ. 1 ನೇ ಆರೋಪಿ ಜೊತೆಗೆ 2 ನೇ ಆರೋಪಿ ಇದ್ದನು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಆರೋಪಿ ಸ್ಥಳದಲ್ಲಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ದೇವದುರ್ಗ ಗ್ರಾಮ ಆಡಳಿತ ಕರ್ತವ್ಯದ ಇಂಚಾರ್ಜ್ ಆಗಿದ್ದ ಆದೇಶದ ಪ್ರತಿಯನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನಾನು ಮಸರಕಲ್ ದಲ್ಲಿ 6 ವರ್ಷದವರೆಗೆ ಕೆಲಸ ಮಾಡಿರುತ್ತೇನೆ. ಆ ದಿನ ಜೀಪ್ ನಲ್ಲಿ ನಾನು ಚಾಸಾ-1 ಮತ್ತು ಜೀಪ್ ಚಾಲಕ ಬಶೀರ 03 ಜನ ಇದ್ದೇವು. ಜೀಪ್ ನಂಬರ್ ನನಗೆ ಹೇಳಲು ಆಗುವುದಿಲ್ಲ. ಗಣೇಶ ಪ್ರತಿಷ್ಠಾಪನೆ ಮಾಡಲು ಪರವಾನಿಗೆ ಪೋಲಿಸ್ ಠಾಣೆಯವರು ಕೊಡುತ್ತಾರೆ. ನಮ್ಮ ಕಂದಾಯ ಇಲಾಖೆಯವರು ಪರವಾನಿಗೆಯನ್ನು ಕೊಡುವುದಿಲ್ಲ. ನಾನು ದೇವದುರ್ಗದಲ್ಲಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಎಷ್ಟು ಗಣೇಶ ಪ್ರತಿಷ್ಠಾಪನೆ ಮಾಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಅಯ್ಯಪ್ಪ ದವಾಖಾನೆ ಎದುರು ಗಣೇಶ ಪ್ರತಿಷ್ಠಾಪನೆ ಮಾಡಿದ ಜಾಗ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಯಾವುದೇ ಗಣೇಶ ಪ್ರತಿಷ್ಠಾಪನೆ ಮಾಡಲು ಪೋಲಿಸ್ ಇಲಾಖೆ, ಕಂದಾಯ ಇಲಾಖೆ ಮತ್ತು ಪುರಸಭೆಯಿಂದ ಅನುಮತಿಯನ್ನು ನೀಡುತ್ತಾರೆ ಎಂದರೆ ಸರಿ. ಗಣೇಶ ಪ್ರತಿಷ್ಠಾಪನೆ ಮಾಡುವವರು ಸಮಿತಿಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಈ

ಪ್ರಕರಣದ ಗಣೇಶ ಪ್ರತಿಷ್ಠಾಪನೆ ಮಾಡಿದ ಸಮಿಯತಿಯ ಅಧ್ಯಕ್ಷರು ಮತ್ತು ಸದಸ್ಯರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ, ಗಣೇಶ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆ ಕಾರ್ಯಕ್ರಮಗಳು ನಡೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಸಂಜೆ 7-45 ಗಂಟೆಯಾಗಿತ್ತು. ನಾವು ಹೋದ ಸಮಯದಲ್ಲಿ ಸ್ಥಳದಲ್ಲಿ 4-5 ಜನರು ಇದ್ದರು. ಆ 4-5 ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ಆ 4-5 ಜನರು ಪೂಜೆ ಮಾಡಲು ಬಂದಿದ್ದಾರೆಯೋ ಅಥವಾ ಗಣೇಶ ಸಮಿತಿಯ ಸದಸ್ಯರೋ ನನಗೆ ಗೊತ್ತಿಲ್ಲ. ರಾಂಟ ಆಡಿ ನಾವು ಸ್ಥಳಕ್ಕೆ ಹೋದಾಗ ಸ್ಪೀಕರ್ ಚಾಲು ಇತ್ತು ನಂತರ ಬಂದ್ ಮಾಡಿರುತ್ತಾರೆ. ಆ ಸ್ಪೀಕರ್‌ಗಳು ಯಾವ ಕಂಪನಿಯದು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರು ದೇವದುರ್ಗ ತಾಲೂಕಿನ 1 ತಿಂಗಳು ಇನ್‌ಚಾರ್ಜ್ ಆಗಿ ಕರ್ತವ್ಯ ಮಾಡಿರುತ್ತಾರೆ. ಚಾಸಾ-1 ರವರು ತಹಶೀಲ್ದಾರ ಇನ್‌ಚಾರ್ಜ್ ಆಗಿದ್ದರು. ಆ ದಿನ ನಾವು ದೇವದುರ್ಗ ಪಟ್ಟಣದ 3-4 ಕಡೆ ಭೇಟಿ ಕೊಟ್ಟಿರುತ್ತೇವೆ. ಯಾವ ಯಾವ ವಾರ್ಡ್ ನಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಸ್ಥಳದಲ್ಲಿ ಸುಮಾರು ಅರ್ದಗಂಟೆಯವರೆಗೆ ಇದ್ದೇವು. ಪೋಲಿಸರು 10 ನಿಮಿಷ ಬಿಟ್ಟು ಸ್ಥಳಕ್ಕೆ ಬಂದಿರುತ್ತಾರೆ. ಚಾಸಾ-1 ರವರು ಪೋಲಿಸರನ್ನು ಸ್ಥಳಕ್ಕೆ ಕರೆಸಿರುತ್ತಾರೆ. ಸ್ಪೀಕರಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗಿರುತ್ತಾರೆ ನನಗೆ ಗೊತ್ತಿಲ್ಲ. ಆರೋಪಿತರು ನಿಮ್ಮ ಮೇಲಾಧಿಕಾರಿಗಳಿಗೆ ನಿಮ್ಮ ಇಲಾಖೆಯವರು ಕೋವಿಡ್ ನಿಯಾಮವಳಿಗಳನ್ನು ಸರಿಯಾಗಿ ಪಾಲನೆ ಮಾಡುತ್ತಿರುವುದಿಲ್ಲ ಎಂದು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಕರ್ತವ್ಯಕ್ಕೆ ಹಾಜರುಆಗುತ್ತಿರಲಿಲ್ಲ ಎಂದು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇದೇ ಸಿಟ್ಟಿನಿಂದ ಚಾಸಾ-1 ರವರು ಆರೋಪಿತರ ವಿರುದ್ದ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಘಟನೆಯಾದ 2 ದಿನದ ನಂತರ ಪೋಲಿಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ದೂರನ್ನು ಘಟನೆಯ ದಿನವೆ ಕೊಟ್ಟಿರುತ್ತಾರೆ. ದಿನಾಂಕ: 24-08-2020 ರಾತ್ರಿ 7-45 ಗಂಟೆಗೆ ನೀವು ಚಾಸಾ-1 -ಮತ್ತು ಜೀಪ್ ಚಾಲಕ ಬಶೀರ್ ದೇವದುರ್ಗ ಪಟ್ಟಣದ ರೌಂಡ್ಸ್ ಗೆ ಹೋಗಿದ್ದೇವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-1 ರವರು ಸ್ಥಳಕ್ಕೆ ಹೋಗಿದ್ದಾಗ 1 ನೇ ಆರೋಪಿ ಸ್ಪೀಕರಗಳಲನ್ನು ಹಚ್ಚಿ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಸುಳ್ಳು

ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-1 ರವರು ಪೋನ್ ಮಾಡಿ ಪೋಲಿಸರನ್ನು ಸ್ಥಳಕ್ಕೆ ಕರೆಸಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿಗಳಾಗಿದ್ದು ಅವರು ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**17.** ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾದ ಚಾಸಾ-1 ಸಂತೋಷರಾಣಿ ರವರನ್ನು ಪ್ರಾಸಾ-5 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 24-08-2020 ರಂದು ತಾನು ಮತ್ತು ಜೀಪ್ ಚಾಲಕ ಬಶೀರ ರವರು ಸಂಚರಿಸುತ್ತಿದ್ದಾಗ, ಸಂಜೆ 7-45 ಗಂಟೆಗೆ ಅಯ್ಯಪ್ಪ ದವಾಖಾನೆ ಎದುರುಗಡೆ ಹೋದಾಗ, ನಿರಂಜನ ಎನ್ನುವಾತ ಗಣೇಶ ಮೂರ್ತಿಯನ್ನು ಪ್ರುಷ್ಠಾಪಿಸಿದ್ದಿ ಅಲ್ಲಿ ಸ್ಪೀಕರಗಳನ್ನು ಇಟ್ಟುಕೊಂಡಿದ್ದು, ಆ ಸಮಯದಲ್ಲಿ ಕೋವಿಡ್ -19 ನಿಯಮಾವಳಿಗಳು ಜಾರಿಯಲ್ಲಿದ್ದು, ದಿನಾಂಕ: 17-08-2020 ರಂದು ಮಾನ್ಯ ಕರ್ನಾಟಕ ಸರ್ಕಾರದ ಆದೇಶದಂತೆ ಕೋವಿಡ್ ನಿಯಮಾವಳಿಗಳನ್ನು ಪಾಲಿಸದೇ ಅದನ್ನು ಉಲ್ಲಂಘನೆ ಮಾಡಿದ್ದು, ನಾನು ಸ್ಪೀಕರಗಳನ್ನು ಹಾಕಬೇಡಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದು ಮತ್ತು ಸಾಮಾಜಿಕ ಆಗ ಆರೋಪಿ ತಾವು ಹಿಂದೂ ಅಂತರ ಕಾಯಿದುಕೊಳ್ಳಲಿಲ್ಲ, ಥರ್ಮಲ್ ಸ್ಕೈನಿಂಗ್ ವ್ಯವಸ್ಥೆ ಇರಲಿಲ್ಲ, ಗಣೇಶವನ್ನು ಇಟ್ಟಿದ್ದು. ಎಲ್ಲಾ ಕಡೆ ಹಾಕುತ್ತಾರೆ, ಮುಸ್ಲಿಂರ ಮೈಕನ್ನು ಬಂದ್ ಮಾಡಿಸಿ, ಮುಸ್ಲಿಂರ ಮೈಕ್ ನಿಮಗೆ ಕಾಣುವುದಿಲ್ಲಾ ಎಂದು ತಾವು ಏಕೆ ಹಾಕಬಾರದೆಂದು ತನಗೆ ಹೇಳಿದ್ದು. ಆಗ ಆಗ ಸೌಂಡ್ ಬಾಕ್ಸ್‌ಗಳನ್ನು ಜೀಪಿಗೆ ಹಾಕಿ ಎಂದು ಹೇಳಿದ್ದು. ಆರೋಪಿತರು ತಾವೇ ತೆಗೆದುಕೊಂಡು ಹೋಗಿದ್ದು ಎಂದು ಹೇಳಿ ಗಾಡಿಯನಲ್ಲಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿದ್ದು. ತಾನು ಪಿ.ಎಸ್.ಐ ರವರಿಗೆ ಪೋನ್ ಮಾಡಿ ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ಆ ಸಮಯದಲ್ಲಿ ಪಿ.ಎಸ್.ಐ ಮತ್ತು ಇಬ್ಬರು

ಪೋಲಿಸರು ಸ್ಥಳಕ್ಕೆ ಬಂದಿದ್ದು. ಸೌಂಡ್ ಬಾಕ್ಸ್‌ಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿದ್ದು. ತಾನು ತಡೆಯಲು ಹೋದಾಗ, ಆರೋಪಿತರು ತನ್ನನ್ನು ತಳ್ಳಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿದ್ದು. ಆರೋಪಿ ತನ್ನ ಗೆಳೆಯರಿಗೆ ಪೋನ್ ಮಾಡಿ ಸ್ಥಳಕ್ಕೆ ಬರಲು ತಿಳಿಸಿದ್ದು ಮತ್ತು ವಿಡಿಯೋ ಮಾಡಿ ಇವರೇನು ಪಿ.ಎಸ್.ಐ ಇದ್ದೀರಾ ನಿಮಗೆ ದೇವದುರ್ಗ ಬರೆದುಕೊಟ್ಟಿದ್ದಾರೆಯೇ ನೀವು ಡಿ.ಸಿ ಇದ್ದೀರಾ ಎಂದು ಹೇಳಿದ್ದು. ಇಬ್ಬರು ಪಿ.ಸಿ ಸ್ಥಳಕ್ಕೆ ಬಂದಿದ್ದು. ತಾನು ಅವರಿಗೆ ಸ್ಪೀಕರಗಳನ್ನು ವಾಪಸ್ಸು ಕೊಡಬೇಕೆಂದು ಅವರಿಗೆ ಹೇಳಿದ್ದು. ಆರೋಪಿತರ ಕೃತ್ಯದಿಂದ ತನ್ನ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು. ಮತ್ತು ಕೋವಿಡ್ ನಿಯಮಾವಳಿಗಳಾದ ಮುಖಕ್ಕೆ ಮಾಸ್ಕ ಧರಿಸದೇ ಇರುವುದು, ಸಾಮಾಜಿಕ ಅಂತರ ಕಾಯಿದು ಕೊಳ್ಳದೇ ಇರುವುದು, ಸ್ಯಾನಿಟೈಜರ್ ಮತ್ತು ಥರ್ಮಲ್ ಸ್ಕಿನಿಂಗ್ ವ್ಯವಸ್ಥೆ ಕಲ್ಪಿಸದೇ ಇರುವುದು ಕಂಡು ಬಂದಿದ್ದು. ಈ ಬಗ್ಗೆ ತಾನು ದೂರು ಕೊಟ್ಟಿದ್ದು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು. ನಂತರ ಮರುದಿನ ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದ್ದು. ಸಾಕ್ಷಿದಾರರು ಪಂಚನಾಮೆ ನೋಡಿ ಗುರುತಿಸಿದ್ದು. ಅದೇ ದಿನ ಪೋಲಿಸ್ ಠಾಣೆಯಲ್ಲಿ ತನ್ನ ಆರೋಪಿತರನ್ನು ನೋಡಿ ಸಾಕ್ಷಿದಾರರು ಹೇಳಿಕೆ ಕೊಟ್ಟಿದ್ದು. ನ್ಯಾಯಾಲಯದ ಮುಂದಿರುವ ಗುರುತಿಸಿದ್ದು. ಮುದ್ದೆಮಾಲು ನೋಡಿದರೆ ಗುರುತಿಸುತ್ತೇನೆ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**18.** ಪ್ರಾಸಾ.5 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 24-08-2020 ರಂದು ನಾನು ಮತ್ತು ಜೀಪ್ ಚಾಲಕ ಬಶೀರ್ ದೇವದುರ್ಗ ಪಟ್ಟಣದ ರೌಂಡ್ ಕರ್ತವ್ಯದಲ್ಲಿದ್ದೇವು ನಮ್ಮ ಇಬ್ಬರು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ದೂರಿನಲ್ಲಿ ಜೀಪ್ ಚಾಲಕ ಬಶೀರ್ ರವರು ಇರುವ ಬಗ್ಗೆ ತಿಳಿಸಿರುತ್ತೇನೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ, ಇಬ್ಬರು ಆರೋಪಿತರು ಮತ್ತು 04 ಜನ ಮಕ್ಕಳು ಅಲ್ಲಿ ಇದ್ದರು. ಆ 4 ಜನ ಮಕ್ಕಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ ನಾನು ಹೋಗುವಷ್ಟರಲ್ಲಿ ಅವರು ಓಡಿ ಹೋಗಿರುತ್ತಾರೆ. ಘಟನಾ ಸ್ಥಳದ ಚಕ್ ಬಂದಿ ನನಗೆ ಹೇಳಲು ಆಗುವುದಿಲ್ಲ. ಘಟನೆಯು ರಾತ್ರಿ 7-45 ರಿಂದ ಸುಮಾರು 15 ನಿಮಿಷ ಆಗಿರುತ್ತದೆ. ನಾನು ದೂರವಾಣಿ ಕರೆ ಮಾಡಿದ ಮೇಲೆ ಅಲ್ಲಿ ಸಂತೋಷ. ಹೆಚ್. ಸಿ ಮತ್ತು

ಪಿ ಎಸ್ ಐ ರಂಗಯ್ಯ ರವರು ಬಂದಿರುತ್ತಾರೆ. ದೂರಿನಲ್ಲಿ ಪಿ ಎಸ್ ಐ ರವರು ಸ್ಥಳಕ್ಕೆ ಬಂದಿದ್ದರು ಎಂದು ಹೇಳಿರುತ್ತೇನೆ. ನಾನು ದೂರವಾಣಿ ಕರೆ ಮಾಡಿದ ಫೋನ್ ಸ್ಮಾರ್ಟ್ ಫೋನ್ ಆಗಿರುತ್ತದೆ. ಸ್ಥಳದಲ್ಲಿ ಗಣೇಶ ವಿಗ್ರಹ ಇಟ್ಟಿರುವುದನ್ನು ಮತ್ತು ಜನರು ಸೇರಿರುವುದನ್ನು ಮೊಬೈಲ್ ನಿಂದ ವಿಡಿಯೋ ಮಾಡಿರುವುದಿಲ್ಲ. ಘಟನೆಯಲ್ಲಿ 1 ನೇ ಆರೋಪಿ ನನ್ನೊಂದಿಗೆ ವಾದ ಮಾಡಿ, ನೀವು ಪಿ.ಎಸ್.ಐ ನಾ, ನೀವು ಡಿ.ಸಿ ನಾ, ದೇವದುರ್ಗ ನಿಮಗೆ ಬರೆದುಕೊಟ್ಟಿದ್ದಾರೆಯೇ ಎಂದು ಹೇಳಿರುತ್ತಾನೆ. 1 ನೇ ಆರೋಪಿ ಫೋನ್ ಮಾಡಿ ನಮ್ಮ ಜನರನ್ನು ಕರೆಸಿ ಎಂದು ಹೇಳಿರುತ್ತಾನೆ. ಕಾನ್‌ಸ್ಟೇಬಲ್ ಸಂತೋಷ ಬರುವ ಪೂರ್ವದಲ್ಲಿ ಘಟನೆ ನಡೆದಾಗ, ಸ್ಥಳದಲ್ಲಿ ನಾನು, ಬಶೀರ್ ಮತ್ತು ಇಬ್ಬರು ಆರೋಪಿತರು ಇದ್ದೇವು. ಆ ದಿನ ನೀವು ಎಷ್ಟು ಕಡೆ ಸ್ಪೀಕರ್‌ಗಳನ್ನು ತೆಗೆಸಿದ್ದೀರಾ ಎಂದರೆ ಸಾಕ್ಷಿಯು ಒಂದೇ ಕಡೆ ಸ್ಪೀಕರ್ ಇಟ್ಟಿದ್ದರು ಅದನ್ನು ತೆಗೆಸಿರುತ್ತೇನೆ ಎನ್ನುತ್ತಾರೆ. ದೂರಿನಲ್ಲಿ ಎಮ್ ಎ ಜಿ ಸಂಖ್ಯೆಯನ್ನು ನಮೂದು ಮಾಡಿ ಸಲ್ಲಿಸಿದ್ದೇನೆ. ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಮ್ ಎ ಜಿ ಪ್ರಕರಣಗಳು ನಮ್ಮ ತಹಶೀಲ್ದಾರ ಕಾರ್ಯಾಲಯದಲ್ಲಿ ನಡೆಯುತ್ತವೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ ಕಾರ್ಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ನಡೆದಿರುವುದಿಲ್ಲ. ದೂರು ಕೊಟ್ಟ ಮರುದಿನ ದಿನಾಂಕ: 26-08-2020 ರಂದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ, ನಾನು, ಪಿ ಎಸ್ ಐ, ಚಾಸಾ-2 ಮತ್ತು 3 ರವರು ಇದ್ದೇವು. ಚಾಸಾ-2 ಮತ್ತು 3 ರವರು ನಿಮ್ಮ ಅಧೀನದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಪಂಚನಾಮೆಯಲ್ಲಿ ಸ್ಥಳವನ್ನು ತೋರಿಸಿರುತ್ತೇನೆ. ಮತ್ತು ಘಟನೆಯ ವಿವರ ಹೇಳಿರುತ್ತೇನೆ. ಮತ್ತು ಪೋಲಿಸ್ ಠಾಣೆಗೆ ಹೋಗಿ ಹೇಲಿಕೆ ಕೊಟ್ಟಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ಸ್ಪೀಕರ್ ಗಳು ಇರಲಿಲ್ಲ. ಸ್ಥಳದಲ್ಲಿ ಗಣೇಶನ ವಿಗ್ರಹ ಕೂರಿಸಿದ ಬಗ್ಗೆ ಛಾಯಾ ಚಿತ್ರವನ್ನು ತೆಗೆಸಿರುವುದಿಲ್ಲ. ನಾನು ಹೇಳಿದಂತೆ ಹೇಳಿಕೆಯನ್ನು ಪಂಚನಾಮೆಯಲ್ಲಿ ಬರೆದುಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ದಿನಾಂಕ: 24-08-2020 ರಾತ್ರಿ 7-45 ಗಂಟೆಗೆ ನೀವು ಮತ್ತು ಜೀಪ್ ಚಾಲಕ ಬಶೀರ್ ದೇವದುರ್ಗ ಪಟ್ಟಣದ ರೌಂಡ್ಸ್ ಗೆ ಹೋಗಿದ್ದೇವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸ್ಥಳಕ್ಕೆ ಹೋಗಿದ್ದಾಗ 1 ನೇ ಆರೋಪಿ ಸ್ಪೀಕರಗಳನ್ನು ಹಚ್ಚಿ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು

ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿತರು ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿತರು ಸಮಾಜಸೇವೆಯನ್ನು ಮಾಡುತ್ತಿದ್ದರು ಮತ್ತು ಕುಂದುಕೊರತೆಗಳ ಬಗ್ಗೆ ತಹಶೀಲ್ದಾರ ಕಾರ್ಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ, ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆಯಾಗಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**19.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-6 ಈರೇಶ ಪೋಲಿಸ್ ಪೇದೆ 276 ರವರನ್ನು ಪ್ರಾಸಾ-6 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರು ದೇವದುರ್ಗ ತಹಶೀಲ್ದಾರರು ಆಗಿದ್ದು. ದಿನಾಂಕ: 24-08-2020 ರಂದು ಮದ್ಯಾಹ್ನ 2-00 ಗಂಟೆಯಿಂದ ರಾತ್ರಿ 9-00 ಗಂಟೆಯವರೆಗೆ ತಾನು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದಾಗ, ಚಾಸಾ-5 ರವರು ಪೋಲಿಸ್ ಠಾಣೆಯಲ್ಲಿ ಗಣಕ ಯಂತ್ರದಲ್ಲಿ ಪೋಲಿಸ್ ಐ.ಟಿ ಕರ್ತವ್ಯದಲ್ಲಿದ್ದರು. ತನ್ನ ಹತ್ತಿರ ಬಂದು ಪಿ.ಎಸ್.ಐ ರವರು ತನಗೆ ಪೋನ್ ಮಾಡಿ ದೇವದುರ್ಗದ ತಹಶೀಲ್ದಾರರಾದ ಚಾಸಾ-1 ರವರು ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ನೀನು ಹೋಗಿ ಸ್ಪೀಕರ್ ತೆಗೆದುಕೊಂಡು ಬಾ ಅಂತಾ ತಿಳಿಸಿದ್ದು. ಆದ ಕಾರಣ ತನ್ನ ಜೊತೆ ನೀನು ಬಾ ಅಂತಾ ತಿಳಿಸಿದ್ದರಿಂದ, ತಾನು ಅವರೊಂದಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಘಟನಾ ಸ್ಥಳಕ್ಕೆ ಹೋಗಿದ್ದು. ಆ ಸಮಯದಲ್ಲಿ ಚಾಸಾ-1 ರಿಂದ 4 ಮತ್ತು 7 ಮತ್ತು 8 ರವರು ಇದ್ದು. ಆ ಸಮಯದಲ್ಲಿ ಅಲ್ಲಿ 1ನೇ ಆರೋಪಿ ಇದ್ದು. ಆಗ ತಾನು ಹಾಗೂ ಚಾಸಾ-5 ರವರು ಸೇರಿಕೊಂಡು ಸ್ಪೀಕರ್ ಕೊಡಿ ಅಂತಾ ಕೇಳಿದಾಗ, ಚಾಸಾ-1 ರವರು ತಮಗೆ ತಿಳಿದ್ದು ಎಂದು ತಾನು 1ನೇ ಆರೋಪಿಗೆ ಹೇಳಿದಾಗ, ನಿಮ್ಮ ಪಿ.ಎಸ್.ಐ ರವರಿಗೆ ಪೋನ್ ಮಾಡಿ ಸ್ಪೀಕರ್ ತೆಗೆದುಕೊಂಡು ಹೋಗಲು ತಿಳಿಸಿದಾಗ, 1ನೇ ಆರೋಪಿ ಸ್ಪೀಕರ್ ತೆಗೆದುಕೊಂಡು ಹೋಗಲು

ತಯಾರಾದಾಗ ತಾನು ಸ್ಪೀಕರ್ ಕೊಡಿ ಎಂದು ತೆಗೆದುಕೊಳ್ಳಲು ಹೋದಾಗ, 1 ನೇ ಆರೋಪಿ ತನ್ನನ್ನು ತಳ್ಳಿ, ಸ್ಪೀಕರಗಳನ್ನು ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟನು ಅಂತಾ ತಿಳಿಸಿದ್ದು. ನಂತರ ತಹಶೀಲ್ದಾರರಾದ ಚಾಸಾ-1 ರವರು ತಮ್ಮ ಸಿಬ್ಬಂದಿಯವರೊಂದಿಗೆ ಜೀಪನಲ್ಲಿ ಕುಳಿತುಕೊಂಡು ಹೋದರು. ನಂತರ ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟ 02 ಸ್ಪೀಕರ್ ಗಳನ್ನು ಸುತ್ತ ಮುತ್ತ ಹುಡುಕಲಾಗಿ ಜನೌಷಧಿ ಅಂಗಡಿ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ 02 ಸ್ಪೀಕರಗಳನ್ನು ಇಟ್ಟಿರುವುದನ್ನು ಒಂದು ಖಾಸಗಿ ಆಟೋದಲ್ಲಿ ಹಾಕಿಕೊಂಡು ಠಾಣೆ ಮುಂದೆ ಹಾಜರುಪಡಿಸಿದ್ದು. ಸ್ಥಳದಲ್ಲಿ 1 ನೇ ಆರೋಪಿಯೊಂದಿಗೆ 2 ನೇ ಆರೋಪಿ ಇದ್ದನು. ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇತ್ತು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅಲ್ಲದೆ ತಹಶೀಲ್ದಾರರ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿದ್ದು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದು. ಮುದ್ದೆ ಮಾಲು ಸ್ಪೀಕರ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**20.** ಪ್ರಾಸಾ.6 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 24-08-2020 ರಂದು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿ ತಾನು ಇದ್ದೇನು. ಮಾಹಿತಿ ಪೋನ್ ಮೂಲಕ ಬಂದಿದ್ದು ತಾನು ಸ್ಥಳಕ್ಕೆ ಹೋದಾಗ ಸಂಜೆ 7-45 ಗಂಟೆ ಆಗಿತ್ತು. ತಮ್ಮ ಠಾಣೆಯ ಸೆಂಟ್ರಿ ರವರಿಗೆ ಹೇಳಿ ನಾನು ಮತ್ತು ಚಾಸಾ-5 ರವರು ಸ್ಥಳಕ್ಕೆ ಹೋಗಿರುತ್ತೇವೆ. ಗಣೇಶ ಉತ್ಸವ ಬಂದೋಬಸ್ತಗಾಗಿ ಎಲ್ಲಾ ಸಿಬ್ಬಂದಿಯವರು ನೇಮಕಗೊಂಡಿದ್ದರು ಹಾಗಾಗಿ ಠಾಣಾ ಎಸ್.ಹೆಚ್.ಓ ಉಸ್ತುವಾರಿಯಾಗಿ ನೇಮಿಸಲು ಸಿಬ್ಬಂದಿಯವರು ಇರಲಿಲ್ಲ. ದೇವದುರ್ಗ ಪಟ್ಟಣದಲ್ಲಿ ಆ ಸಮಯದಲ್ಲಿ ಅಂದಾಜು 25 ಕಡೆ ಗಣೇಶ ಪ್ರತಿಷ್ಠಾಪನೆ ಮಾಡಿರುತ್ತಾರೆ ನಿಖರವಾಗಿ ಹೇಳಲು

ಬರುವುದಿಲ್ಲ. ಅಯ್ಯಪ್ಪ ಡಾಕ್ಟರ್ ದವಖಾನೆ ಎದುರು ಗಣೇಶ್ ಪ್ರತಿಷ್ಠಾಪನೆ 23-08-2020 ರಂದು ಆಗಿರುತ್ತದೆ. ನಮ್ಮ ಠಾಣೆಯಿಂದ ಅಯ್ಯಪ್ಪ ಡಾಕ್ಟರ್ ದವಖಾನೆ 1 ಕಿ ಮಿ ಒಳಗಡೆ ಇರುತ್ತದೆ. ಗಣೇಶ್ ಪ್ರತಿಷ್ಠಾಪನೆ ಖುಲ್ಲಾ ಜಾಗದಲ್ಲಿ ಮಾಡಿರುತ್ತಾರೆ ಆ ಜಾಗದ ಮಾಲೀಕರು ಯಾರು ಇರುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ, ಅಲ್ಲಿ 1 ಮತ್ತು 2 ನೇ ಆರೋಪಿತರು ಮತ್ತು 4-5 ಜನ ಹುಡುಗರು ಇದ್ದರು ಆ ಹುಡುಗರ ಹೆಸರು ನನಗೆ ಹೇಳಲು ಆಗುವುದಿಲ್ಲ. ನಮ್ಮನ್ನು ಮತ್ತು ಆರೋಪಿತರನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ನಾವು ಸ್ಥಳಕ್ಕೆ ಹೋದಾಗ, ಚಾಸಾ-1 ರವರು ಸ್ಪೀಕರ್ ಬಂದ್ ಮಾಡಿಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಚಾಸಾ-1 ರವರು ಇದ್ದರು. ಸ್ಪೀಕರನ್ನು ತೆಗೆದುಕೊಳ್ಳಲು ನಾನು ಮತ್ತು ಚಾಸಾ-5 ರವರು ಹೋಗಿರುತ್ತೇವೆ. 1 ನೇ ಆರೋಪಿ ನಮ್ಮನ್ನು ತಳ್ಳಿ ಸ್ಪೀಕರ್ ತೆಗೆದುಕೊಂಡು ಹೋಗಿರುತ್ತಾನೆ. ಆ ಸಮಯದಲ್ಲಿ ನಾನು 1 ನೇ ಆರೋಪಿಯ ಮೇಲೆ ದಸ್ತಗಿರಿ ಕ್ರಮ ತೆಗೆದುಕೊಂಡಿರುವುದಿಲ್ಲ. ಆರೋಪಿ ನಂಬರ್ 1 ಮತ್ತು 2 ಸ್ಪೀಕರ್ ನ್ನು ತೆಗೆದುಕೊಂಡು ಎಲ್ಲಿಗೆ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾವು ಹುಡುಕಾಡಿದಾಗ ಸ್ಪೀಕರ್ ಗಳು ಜನೌಷಧಿ ಅಂಗಡಿ ಹತ್ತಿರ ಘಟನೆ ನಡೆದ ಅರ್ದ ಗಂಟೆಯಲ್ಲಿ ಸಿಕ್ಕಿರುತ್ತವೆ. ಜನೌಷಧಿ ಅಂಗಡಿ ಆ ಸಮಯದಲ್ಲಿ ತೆರೆದಿತ್ತು. ಅಂಗಡಿಯವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಮತ್ತು ಸ್ಪೀಕರ್ ನ್ನು ಇಟ್ಟ ಸ್ಥಳದಲ್ಲಿ ನಾನು ಛಾಯಾ ಚಿತ್ರಗಳನ್ನು ತೆಗೆದುಕೊಂಡಿರುವುದಿಲ್ಲ. ಸ್ಪೀಕರ್ ಗಳು ಯಾವ ಕಂಪನಿಯದಿತ್ತು ಅದರ ಕ್ರಮಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಸ್ಪೀಕರ್ ತೆಗೆದುಕೊಂಡು ಹೋದಾಗ ಆರೋಪಿತರು ನಮ್ಮನ್ನು ತಳ್ಳಿ ಸ್ಪೀಕರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ನನ್ನ ಹೇಳಿಕೆಯಲ್ಲಿ ಕೊಟ್ಟಿದ್ದೇನೆ. ಸ್ಥಳದಲ್ಲಿ ಚಾಸಾ-1 ರವರು ಸ್ವಲ್ಪ ಹೊತ್ತು ಇದ್ದರು ನಂತರ ಸ್ಪೀಕರ್ ತೆಗೆದುಕೊಂಡು ಹೋಗಲು ತಿಳಿಸಿರುತ್ತಾರೆ. ಆ ಸಮಯದಲ್ಲಿ ಕರೋನಾ ಸಾಂಕ್ರಮಿಕ ರೋಗ ಹರಡುವ ಸಾದ್ಯತೆ ಇರುವುದರಿಂದ ಯಾರಿಗೂ ಗಣೇಶ್ ಪ್ರತಿಸ್ಥಾಪನೆ ಮಾಡಲು ಪರವಾನಿಗೆ ಕೊಟ್ಟಿರುವುದಿಲ್ಲ. ದಿನಾಂಕ: 24-08-2020 ರಂದು ನೀವು ಠಾಣಾ ಎಸ್ ಎಚ್ ಓ ಕರ್ತವ್ಯದಲ್ಲಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಮಾಹಿತಿ ಬಂದಿದ್ದು ಸ್ಥಳಕ್ಕೆ ಹೋಗಿ ಸ್ಪೀಕರ್ ತೆಗೆದುಕೊಳ್ಳಲು ಹೋದಾಗ ಆರೋಪಿತರು ತಳ್ಳಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ. ಜನೌಷಧಿ ಅಂಗಡಿ ಹತ್ತಿರ ಸ್ಪೀಕರ್‌ಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆಮಾಲಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಎಂದು ಸಾಕ್ಷಿ ನುಡಿದಿರುತ್ತಾರೆ.

**21.** ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ-9 ರಂಗಯ್ಯ ಕೈ ಪಿ.ಎಸ್.ಐ ರವರನ್ನು ಪ್ರಾಸಾ-7 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 25-08-2020 ರಂದು ಮದ್ಯಹ್ನಾ 2-00 ರಿಂದ ರಾತ್ರಿ 9-00 ಗಂಟೆಯವರೆಗೆ ತಾನು ಠಾಣೆ ಕರ್ತವ್ಯದಲ್ಲಿದ್ದಾಗ, ರಾತ್ರಿ 8-15 ಗಂಟೆ ಸುಮಾರಿಗೆ ಚಾಸಾ-1 ತಹಶೀಲ್ದಾರರವರು ಠಾಣೆಗೆ ಹಾಜರಾಗಿ ಲಿಖಿತ ಗಣಕೀಕೃತ ದೂರನ್ನು ಹಾಜರು ಪಡಿಸಿದ್ದು. ಸದರಿ ದೂರನ್ನು ಪಡೆದುಕೊಂಡು, ತಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 142/2020 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 353, 186, 269, 270 ಸಹವಾಚಕ ಕಲಂ 34 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿದ್ದು. ಸಾಕ್ಷಿ ಎಫ್.ಐ.ಆರ್ ನೋಡಿ ಗುರುತಿಸಿದ್ದು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು. ಅದೆ ದಿನಾಂಕದಂದು ಚಾಸಾ-5 ರವರು ವಶಪಡಿಸಿಕೊಂಡಿದ್ದ ಎರಡು ದೊಡ್ಡ ಸ್ಪೀಕರ್ ಬಾಕ್ಸ್‌ಗಳನ್ನು ನ್ಯಾಯಾಲಯಕ್ಕೆ ಜಮಾ ಮಾಡಲು ಅನುಮತಿ ಕೋರಿದ್ದು, ಸ್ವತ್ತಿನ ಪಟ್ಟಿ ನೋಡಿ ಸಾಕ್ಷಿದಾರರು ಗುರುತಿಸಿದ್ದು. ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿದ್ದು. ಸಾಕ್ಷಿದಾರರು ನೋಡಿ ಗುರುತಿಸಿದ್ದು. ಅದೇ ದಿನ ಫಿರ್ಯಾದಿದಾರರ ಮತ್ತು ಸಾಕ್ಷಿದಾರರಾದ 4 ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು. ನಂತರ ದಿನಾಂಕ: 19-11-2020 ರಂದು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರಿಂದ ಚಾಸಾ-1 ರವರ ಕರ್ತವ್ಯ ಪ್ರಮಾಣ ಪತ್ರ ಮತ್ತು 02 ಅಧಿಕೃತ ಜ್ಞಾಪಾನ ಪತ್ರ ಪಡೆದುಕೊಂಡಿದ್ದು. ಸಾಕ್ಷಿದಾರರು ನೋಡಿ ಗುರುತಿಸಿದ್ದು. ದಿನಾಂಕ: 10-09-2020

ರಂದು ಆರೋಪಿತರು ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ರಾಯಚೂರು ಇವರಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು. ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿದ್ದು. ಸದರಿ ನಿರೀಕ್ಷಣಾ ಜಾಮೀನು ಆದೇಶಗಳನ್ನು ಕ್ರಮವಾಗಿ ನಿ.ಪಿ-8 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದು. ಆರೋಪಿತರ ವಿರುದ್ದ ಸಾಕಷ್ಟು ದೋಷಾರೋಪಣೆಗಳು ಕಂಡು ಬಂದಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**22.** ಪ್ರಾಸಾ.7 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 25-08-2020 ರಂದು ಠಾಣಾಧಿಕಾರಿಗಳಾಗಿ ನಾನೇ ಕರ್ತವ್ಯದಲ್ಲಿದ್ದೇನು. ದೂರು ಕೊಡಲು ಚಾಸಾ-1 ತಹಶೀಲ್ದಾರರವರು ಒಬ್ಬರೆ ಬಂದಿದ್ದರು. ಸುಮಾರು 1 ಗಂಟೆಯವರೆಗೆ ಅವರು ಠಾಣೆಯಲ್ಲಿದ್ದರು. ಘಟನೆಯು ದಿನಾಂಕ: 24-08-2020 ರಂದು ಆಗಿದ್ದು, ದೂರನ್ನು ತಡವಾಗಿ 25-08-2020 ರಂದು ಸಲ್ಲಿಸಿದ್ದು ತಡವಾಗಿ ದೂರು ಕೊಟ್ಟ ಬಗ್ಗೆ ಕಾರಣಗಳಣಗಳನ್ನು ದೂರಿನಲ್ಲಿ ಮತ್ತು ಎಫ್ ಐ ಆರ್ ಕಾಲಂ ನಂಬರ್ 3(ಸಿ) ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ದೂರು ದಾಖಲಿಸಿದ ಮರುದಿನ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಚಾಸಾ-5 ರವರು ಸ್ಪೀಕರ್ ಗಳನ್ನು ತಂದು ಹಾಜರುಪಡಿಸಿರುತ್ತಾರೆ. ಸ್ಪೀಕರ್ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ. ಘಟನಾ ಸ್ಥಳವನ್ನು ಚಾಸಾ-1 ರವರು ನನಗೆ ತೋರಿಸಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಛಾಯಾ ಚಿತ್ರವನ್ನು ತೆಗೆಸಿರುತ್ತಾರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಪಂಚನಾಮೆ ಮಾಡಲು ಸ್ಥಳಕ್ಕೆ ಹೋದಾಗ ಗಣೇಶ ಪೆಂಡಾಲ್ ಇತ್ತು. ಅದನ್ನು ಬಿಟ್ಟು ಮತ್ತೇನು ಇರಲಿಲ್ಲ. ಪಂಚನಾಮೆಯಲ್ಲಿ ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿರುವುದನ್ನು ತೋರಿಸಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಗಣೇಶ ವಿಗ್ರಹ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಜಾಗ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಗುನ್ನೆ ಸ್ಥಳದ ಪಂಚನಾಮೆ ಪೂರ್ವಕ್ಕೆ ಖಾಲಿ ಜಾಗ ನಂತರ ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಶೆಡ್ ಇದೆ, ಪಶ್ಚಿಮಕ್ಕೆ ಜೆ ಪಿ ಸರ್ಕಲ್ ರಸ್ತೆ, ಉತ್ತರಕ್ಕೆ ಜೆ ಪಿ

ಸರ್ಕ್ ಲ್ ಗೆ ಹೋಗುವ ರಸ್ತೆ, ದಕ್ಷಿಣಕ್ಕೆ ದೇವದುರ್ಗ ತಹಶೀಲ್ದಾರ ಕಚೇರಿಗೆ ಹೋಗುವ ರಸ್ತೆ ಇರುತ್ತದೆ. ಪೂರ್ವ ದಿಕ್ಕಿಗೆ ಇರುವ ಖಾಲಿ ಜಾಗ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ದೂರು ಕೊಡುವ ಪೂರ್ವದಲ್ಲಿ ಚಾಸಾ-1 ರವರು ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿ ಸ್ಪೀಕರ್ ಹಚ್ಚಿದ ಬಗ್ಗೆ ನನಗೆ ಮಾಹಿತಿಯನ್ನು ಕೊಟ್ಟಿಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪೋಲಿಸ್ ಠಾಣೆಯಲ್ಲಿ ಪಡೆದಿರುತ್ತೇನೆ. ಚಾಸಾ-2 ಮತ್ತು 3 ಪಂಚ ಸಾಕ್ಷಿದಾರರು ತಹಶೀಲ್ದಾರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಯಾಗಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರಾದ ಚಾಸಾ-7 ಮತ್ತು 8 ರವರು ತಹಶೀಲ್ದಾರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಯಾಗಿರುತ್ತಾರೆ ಎಂದರೆ ಸರಿ. ಗಣೇಶ ಪ್ರತಿಷ್ಠಾಪನೆ ಮಾಡಿದ ಜಾಗದ ಸುತ್ತ ಖಾಲಿ ಜಾಗ ಮತ್ತು ಮನೆಗಳು ಇರುತ್ತವೆ. ಆರೋಪಿತರು ಚಾಸಾ-1 ರವರು ಕರ್ತವ್ಯಲೋಪ ಮಾಡಿದ್ದಾರೆಂದು ದೂರು ಕೊಟ್ಟಿರುವ ವಿಷಯ ನನಗೆ ಮಾಹಿತಿ ಇಲ್ಲ. ಇದೇ ಕಾರಣಕ್ಕಾಗಿ ಚಾಸಾ-1 ರವರು ಸಿಟ್ಟುಮಾಡಿಕೊಂಡು ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ: 25-08-2020 ರಂದು ರಾತ್ರಿ 8-15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ದೂರು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಗುನ್ನೆ ಸ್ಥಳದ ಪಂಚನಾಮೆ ಮಾಡಿದ್ದೀರಿ ಎಂದರೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಕರ್ತವ್ಯದ ಪ್ರಮಾಣ ಪಡೆದುಕೊಂಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಿಬ್ಬಂದಿ ಚಾಸಾ-5 ರವರಿಂದ ಸ್ಪೀಕರ್ ವಶಪಡಿಸಿಕೊಂಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**23.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-8 ಬಶೀರಅಹ್ಮದ್ ರವರನ್ನು ಪ್ರಾಸಾ-8 ರಂತೆ ಅಭಿಯೋಜನೆಯ ಪರವಾಗಿ ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದಿನಾಂಕ: 20-08-2020 ರಿಂದ ಇಲ್ಲಿಯವರೆಗೆ ರವರೆಗೆ ದೇವದುರ್ಗ ತಹಶೀಲ್ದಾರ ಕಚೇರಿಯಲ್ಲಿ ಜೀಪ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದ ಬಗ್ಗೆ ತನಗೇನು ಗೊತ್ತಿಲ್ಲ,

ಘಟನೆಯ ಕುರಿತು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**24.** ಪ್ರಾಸಾ.8 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 24-08-2020 ರಂದು ನಾನು ಮತ್ತು ಚಾಸಾ-1 ರವರು ಸಂಚರಿಸುತ್ತಿದ್ದಾಗ, ಸಂಜೆ 7-45 ಗಂಟೆಗೆ ಅಯ್ಯಪ್ಪ ದವಾಖಾನೆ ಎದುರುಗಡೆ ಹೋದಾಗ, ನಿರಂಜನ ಎನ್ನುವಾತ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು ಅಲ್ಲಿ ಸ್ಪೀಕರಗಳನ್ನು ಇಟ್ಟುಕೊಂಡಿದ್ದು, ಆ ಸಮಯದಲ್ಲಿ ಕೋವಿಡ್ -19 ನಿಯಮಾವಳಿಗಳು ಜಾರಿಯಲ್ಲಿದ್ದು, ದಿನಾಂಕ: 17-08-2020 ರಂದು ಮಾನ್ಯ ಕರ್ನಾಟಕ ಸರ್ಕಾರದ ಆದೇಶದಂತೆ ಕೋವಿಡ್ ನಿಯಮಾವಳಿಗಳನ್ನು ಪಾಲಿಸದೇ ಅದನ್ನು ಉಲ್ಲಂಘನೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-1 ರವರು ಸ್ಪೀಕರಗಳನ್ನು ಹಾಕಬೇಡಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದು ಮತ್ತು ಸಾಮಾಜಿಕ ಆಗ ಅಂತರ ಕಾಯಿದುಕೊಳ್ಳಲಿಲ್ಲ, ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಾವು ಹಿಂದೂ ಗಣೇಶವನ್ನು ಇಟ್ಟಿದ್ದು ಎಲ್ಲಾ ಕಡೆ ಹಾಕುತ್ತಾರೆ, ಮುಸ್ಲಿಂರ ಮೈಕನ್ನು ಬಂದ್ ಮಾಡಿಸಿ, ಮುಸ್ಲಿಂರ ಮೈಕ್ ನಿಮಗೆ ಕಾಣುವುದಿಲ್ಲಾ ಎಂದು ನಾವು ಏಕೆ ಹಾಕಬಾರದೆಂದು ನನಗೆ ಹೇಳಿರುತ್ತಾನೆ. ಆಗ ಆಗ ಸೌಂಡ್ ಬಾಕ್ಸ್‌ಗಳನ್ನು ಜೀಪಿಗೆ ಹಾಕಿ ಎಂದು ಚಾಸಾ-1 ರವರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಾವೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಹೇಳಿ ಗಾಡಿಯನಲ್ಲಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ಪಿ.ಎಸ್.ಐ ರವರಿಗೆ ಪೋನ್ ಮಾಡಿ ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ಆ ಸಮಯದಲ್ಲಿ ಪಿ.ಎಸ್.ಐ ಮತ್ತು ಇಬ್ಬರು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸೌಂಡ್ ಬಾಕ್ಸ್‌ಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ತಡೆಯಲು ಹೋದಾಗ, ಆರೋಪಿತರು ಅವರನ್ನು ತಳ್ಳಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ಗೆಳೆಯರಿಗೆ ಪೋನ್ ಮಾಡಿ ಸ್ಥಳಕ್ಕೆ ಬರಲು ತಿಳಿಸಿರುತ್ತಾನೆ ಮತ್ತು ವಿಡಿಯೋ ಮಾಡಿ ಇವರೇನು ಪಿ ಎಸ್ ಐ ಇದ್ದೀರಾ ನಿಮಗೆ ದೇವದುರ್ಗ ಬರೆದುಕೊಟ್ಟಿದ್ದಾರೆಯೇ ನೀವು ಡಿ ಸಿ ಇದ್ದೀರಾ

ಎಂದು ಹೇಳಿರುತ್ತಾನೆ. ಇಬ್ಬರು ಪಿ.ಸಿ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಅವರಿಗೆ ಸ್ವೀಕರಗಳನ್ನು ವಾಪಸ್ಸು ಕೊಡಬೇಕೆಂದು ಅವರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಕೃತ್ಯದಿಂದ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮತ್ತು ಕೋವಿಡ್ ನಿಯಮಾವಳಿಗಳಾದ ಮುಖಕ್ಕೆ ಮಾಸ್ಕ ಧರಿಸದೇ ಇರುವುದು, ಸಾಮಾಜಿಕ ಅಂತರ ಕಾಯಿದು ಕೊಳ್ಳದೇ ಇರುವುದು, ಸಾನಿಟೈಜರ್ ಮತ್ತು ಥರ್ಮಲ್ ಸಿನಿಂಗ್ ವ್ಯವಸ್ಥೆ ಕಲ್ಪಿಸದೇ ಇರುವುದು ಕಂಡು ಬಂದಿರುತ್ತದೆ ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ.ಪಿ-9 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ

**25.** ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಸಂಪೂರ್ಣವಾಗಿ ಗಮನಿಸಿದಾಗ, ಮುಖ್ಯವಾಗಿ ನಿ.ಪಿ-1 ರಂತಿರುವ ಮಹಜರನ್ನು ಅಂಶಗಳ ಬಗ್ಗೆ ಅಭಿಯೋಜನೆಯವರು ಸಾಬೀತುಪಡಿಸುವುದರಲ್ಲಿ ವಿಫಲರಾಗಿರುತ್ತಾರೆ ಹಾಗೂ ಪಂಚಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ಪಂಚನಾಮೆಯ ಅಂಶಗಳ ಬಗ್ಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದು ಆರೋಪಿತರ ಪರ ವಕೀಲರು ವಾದ ಮಂಡಿಸಿರುತ್ತಾರೆ. ಆ ಕಾರಣ ಮಹಜರ್ ಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರು ಸಾಕ್ಷ್ಯವನ್ನು ಕೂಲಂಕುಷವಾಗಿ ಪರೀಶಿಲಿಸುವ ಅವಶ್ಯಕತೆ ಇರುತ್ತದೆ. ಸದರಿ ಪ್ರಾಸಾ-1 ಪಂಚಸಾಕ್ಷಿದಾರರು ನಿ.ಪಿ-1 ರಂತಿರುವ ಸ್ಥಳ ಪಂಚನಾಮೆಯ ಅಂಶಗಳ ಬಗ್ಗೆ ತಮ್ಮ ಮುಖ್ಯ ವಿಚಾರಣೆಯಲ್ಲಿ ಪೂರಕವಾಗಿರುವಂತಹ ಸಾಕ್ಷ್ಯವನ್ನು ನುಡಿದಿದ್ದರೂ ಸದರಿ ಸಾಕ್ಷಿದಾರರನ್ನು ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ ಚಾಸಾ-1 ರವರು ಪೋಲಿಸ್ ಠಾಣಾಗೆ ಹೋದ ಬಗ್ಗೆ ಗೊತ್ತಿಲ್ಲ. ನಿ.ಪಿ-1 ಕ್ಕೆ ತಾನು ಮತ್ತು ಚಾಸಾ-3 ರವರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿದೆ, ದೂರು ದಾಖಲಾದ ಮೇಲೆ ನಾನು ಸ್ಥಳಕ್ಕೆ ಹೋಗಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆ ಕಾರಣ ಇವರ ಪಾಟೀ ಸವಾಲನ್ನು ಪರಿಶೀಲನೆ ಮಾಡಿದಾಗ ಸದರಿ ಸಾಕ್ಷಿದಾರರು ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ದೂರು ದಾಖಲಾದ ನಂತರ ಅವರು ಸ್ಥಳಕ್ಕೆ ಹೋಗಿಲ್ಲ ಹಾಗೂ ಅವರ ಸಮಕ್ಷಮ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದು ಸ್ಪಷ್ಟವಾಗಿ

ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ಮತ್ತೊಬ್ಬ ಪಂಚಸಾಕ್ಷಿದಾರರಾದ ಪ್ರಾಸಾ-2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಮಹಜರ್ ಅಂಶಗಳ ಬಗ್ಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು. ಸದರಿ ಸಾಕ್ಷಿದಾರರನ್ನು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಯಾವುದೇ ಪೂರಕವಾಗಿರುವಂತಹ ಅಂಶವನ್ನು ಹೊರತಂದಿರುವುದಿಲ್ಲ. ಆ ಕಾರಣ ಪಂಚ ಸಾಕ್ಷಿದಾರರಾದ ಪ್ರಾಸಾ-1 ರವರು ಪಾಟೀ ಸಾವಲ್ಲಿನಲ್ಲಿ ಪ್ರತಿಕೂಲ ಸಾಕ್ಷಿ ಹಾಗೂ ಪ್ರಾಸಾ-2 ಪಂಚಸಾಕ್ಷಿದಾರರು ಮುಖ್ಯ ವಿಚಾರಣೆಯಲ್ಲಿ ಹಾಗೂ ಪಾಟೀ ಸಾವಲಿನಲ್ಲಿ ಸಂಪೂರ್ಣವಾಗಿ ಮಹಜರನ್ ಅಂಶಗಳ ಬಗ್ಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿರುವುದು ಕಂಡುಬಂದಿರುತ್ತದೆ. ದೂರದಾರರಾದ ಪ್ರಾಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-1 ರಂತಿರುವ ಮಹಜರ್‌ನ ಅಂಶಗಳ ಬಗ್ಗೆ ಪೂರಕವಾದ ಸಾಕ್ಷ್ಯವನ್ನು ನುಡಿದಿದ್ದರು. ಆರೋಪಿ ಪರ ವಕೀಲರು ಸದರಿ ಸಾಕ್ಷಿದಾರರನ್ನು ಪಾಟೀ ಸವಾಲ್ಲಿಗೆ ಒಳಪಡಿಸಿದಾಗ ದೂರ ಕೊಟ್ಟ ಮರುದಿನ ದಿನಾಂಕ 26-08-2020 ರಂದು ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ತಾನು ಪಿ.ಎಸ್‌ಐ ಚಾಸಾ-2 ಮತ್ತು 3 ರವರು ಇದ್ದೆವು. ಚಾಸಾ-2 ಮತ್ತು 3 ರವರು ತಮ್ಮ ಅಧೀನದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಪಂಚನಾಮೆಯ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಘಟನೆ ವಿವರವನ್ನು ಹೇಳಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ತನ್ನ ಹೇಳಿಕೆಕೊಟ್ಟಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ಸ್ಪೀಕರ್‌ಗಳು ಇರಲಿಲ್ಲ, ಯಾವುದೇ ಛಾಯಾಚಿತ್ರವನ್ನು ತೆಗೆಸಿಲ್ಲ. ತಾನು ಹೇಳಿದಂತೆ ಪಂಚನಾಮೆಯನ್ನು ಬರೆದುಕೊಂಡಿದ್ದು, ಪಂಚನಾಮೆ ಕಾಲಕ್ಕೆ ಯಾವುದೇ ವಸ್ತು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ಸ್ಪಷ್ಟವಾಗಿ ತಮ್ಮ ಪಾಟೀ ಸವಾಲಿನಲ್ಲಿ ಪ್ರತಿಕೂಲ ಸಾಕ್ಷಿವನ್ನು ನುಡಿದಿರುವುದು ಕಂಡುಬಂದಿರುತ್ತದೆ. ಆ ಕಾರಣ ನಿಪಿ-1 ರಂತಿರುವ ಸ್ಥಳ ಪಂಚನಾಮೆಯನ್ನು ಘಟನೆ ಸ್ಥಳದಲ್ಲಿ ಮಾಡಿ ಸ್ಪಿಕರ್ ಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಅಭಿಯೋಜನೆಯವರು ಸಾಬೀತುಪಡಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

**26.** ನಿ.ಪಿ-2 ರಂತಿರುವ ದೂರಿನ ಅಂಶಗಳನ್ನು ಪರಿಶೀಲಿಸಿದಾಗ ಪ್ರಾಸಾ-3 ರವರು ಸ್ಪೀಕರ್ ತೆಗೆದುಕೊಂಡು ಹೋದರು ಎಂದು ನಮೂದು ಮಾಡಿದ್ದು, ಪ್ರಾಸಾ-1 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ನಾನು ಸ್ಪೀಕರನ್ನು ತೆಗೆದುಕೊಳ್ಳಲು ಹೋದಾಗ ಆರೋಪಿತರು ನನ್ನನ್ನು

ಸ್ಪೀಕರನ್ನು ತಳ್ಳಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ವ್ಯತ್ಯಾಸವಾಗಿ ತಿಳಿಸಿರುತ್ತಾರೆ. ಈ ರೀತಿ ಈ ಪ್ರಕರಣದ ದೂರಿನಲ್ಲಿ ಪ್ರಾಸಾ-5 ದೂರುದಾರರನ್ನು ಆರೋಪಿತರು ತಳ್ಳಿ ಸ್ಪೀಕರನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಈ ರೀತಿ ಪ್ರಾಸಾ-1 ರವರು ಬೆಳವಣಿಗೆ ಸಾಕ್ಷ್ಯವನ್ನು ನುಡಿದಿರುವುದು ಕಂಡುಬಂದಿರುತ್ತದೆ, ಹಾಗೂ ಘಟನೆಯ ಕುರಿತು ದೂರುದಾರರಾದ ಪ್ರಾಸಾ-5 ರವರನ್ನು ಪಾಟೀ ಸಾವಲಿಗೆ ಒಳಪಡಿಸಿದಾಗ ಘಟನೆಯಲ್ಲಿ 1 ನೇ ಆರೋಪಿತನೊಂದಿಗೆ ವಾದ ಮಾಡಿದ್ದು, 1 ನೇ ಆರೋಪಿಗೆ ಫೋನ್ ಮಾಡಿ ತಮ್ಮ ಜನರನ್ನು ಬಾ ಎಂದು ಹೇಳಿರುತ್ತಾನೆ. ಕಾನೇಸ್ಟೇಬಲ್ ಸಂತೋಷ್ ರವರು ಬರುವ ಪೂರ್ವದಲ್ಲಿ ಘಟನೆ ನಡೆದಾಗ ಸ್ಥಳದಲ್ಲಿ ತಾನು ಬಸಿರ್ ಮತ್ತು ಇಬ್ಬರೂ ಮಾತ್ರ ಇದ್ದೆವು ಎಂದು ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾರೆ.

**27.** ಅದೇ ರೀತಿ ಪ್ರಾಸಾ-3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ನಾವು ಸ್ಥಳಕ್ಕೆ ಹೋದಾಗ ಸಮಯ 7-50 ರಿಂದ 7-55 ಗಂಟೆಯಾಗಿತ್ತು. ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-1,4, 7 ಮತ್ತು 8 ರವರು ಇದ್ದರು, ಇವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸಮಯದಲ್ಲಿ ಸ್ಪೀಕರ್ ಹಚ್ಚಿದ ಬಗ್ಗೆ ಫೋಟೋವಾಗಲಿ ವಿಡಿಯೋವಾಗಲಿ ತಾನು ನೋಡಿರುವುದಿಲ್ಲ. ಸದರಿ ಪ್ರಾಸಾ-3 ರವರು ಪಾಟೀ ಸವಾಲಿ ಗಮನಿಸಿದಾಗ ಅವರು ಸ್ಥಳಕ್ಕೆ ಹೋದಾಗ ಚಾಸಾ-1, 4, 7 ಮತ್ತು 8 ರವರು ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಸ್ಥಳದಲ್ಲಿ ಆರೋಪಿತರು ಇದ್ದರು ಎಂದು ತಿಳಿಸಿರುವುದಿಲ್ಲ. ಆ ಕಾರಣ ಪ್ರಾಸಾ-1 ರವರು ಸ್ಥಳಕ್ಕೆ ಹೋದಾಗ ಆರೋಪಿತರು ಅಲ್ಲಿದ್ದರು ಎಂದು ಸಂಶಯಕ್ಕೆ ಎಡೆ ಮಾಡಿಕೊಟ್ಟಿರುತ್ತದೆ.

**28.** ಈ ಪ್ರಕರಣದಲ್ಲಿ ವಶಪಡಿಸಿಕೊಂಡ 2 ಸ್ಪೀಕರ್ ಗಳನ್ನು ನಿಪಿ-1 ರಂತಿರುವ ಪಂಚನಾಮೆ ಮಾಡುವ ಕಾಲಕ್ಕೆ ವಶಪಡಿಸಿಕೊಂಡಿರುತ್ತಾರೆ ಎಂದು ಅದನ್ನು ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ಸ್ಪೀಕರನ್ನು ದೇವದುರ್ಗ ಪಟ್ಟಣದ ಜನಔಷದಿ ಕೇಂದ್ರ ಹತ್ತಿರ ವಶಪಡಿಸಿಕೊಂಡಿರುವುದಾಗಿ ಪ್ರಾಸಾ-3 ರವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸಿರುತ್ತಾರೆ. ಆದರೆ ಸ್ಪೀಕರ್ ಜಪ್ತಿ ಪಂಚನಾಮೆ ಮಾಡುವ ಕಾಲಕ್ಕೆ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

ಆದ್ದರಿಂದ ಸ್ಪೀಕರ್‌ಗಳನ್ನು ಸ್ಥಳದಿಂದ ವಶಪಡಿಸಿಕೊಂಡಿರುತ್ತಾರೆ ಎಂದು ಸಂಶಯಕ್ಕೆ ಎಡೆಮಾಡಿಕೊಟ್ಟಿರುತ್ತದೆ. ಇದರ ಲಾಭವನ್ನು ಆರೋಪಿತರು ಪಡೆಯಲು ಅರ್ಹರಿರುತ್ತಾರೆ.

**29.** ಆರೋಪಿತರು ದಿನಾಂಕ 24-08-2020 ರಂದು ರಾತ್ರಿ 7-45 ಗಂಟೆಗೆ ದೇವದುರ್ಗ ಪಟ್ಟಣದ ಅಯ್ಯಪ್ಪ ಗವಾಖಾನೆಯ ಎದುರಿಗೆ ಗಣೇಶ ವಿಗ್ರಹವನ್ನು ಸ್ಥಾಪಿಸಿದ್ದು, ಅಲ್ಲಿ ಧ್ವನಿವರ್ಧಕ ಸ್ಪೀಕರ್‌ಗಳನ್ನು ಇಟ್ಟುಕೊಂಡು ಸಾಮಾಜಿಕ ನಂತರ ಕಾಯ್ದುಕೊಳ್ಳದೆ ಥಾರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆ ಕಲ್ಪಿಸದೇ ಕರೋನಾ ರೋಗದ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ಚಾಸಾ-1 ರವರು ಗಸ್ತು ಕರ್ತವ್ಯದಲ್ಲಿದ್ದಾಗ, ಕರೋನಾ ಸಾಂಕ್ರಾಮಿಕ ರೋಗದ ನಿಯಮಗಳನ್ನು ಉಲ್ಲಂಘಿಸಿದ ವಿಷಯದಲ್ಲಿ ಚಾಸಾ-1 ರವರಿಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ನಿ.ಪಿ-2 ದೂರಿನಲ್ಲಿ ಹಾಗೂ ಪ್ರಾಸಾ-3 ರಿಂದ 6 ರವರ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಪ್ರಾಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ರಾತ್ರಿ-07-45 ಗಂಟೆಗೆ ಅವರು ಗಸ್ತು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ಮತ್ತು ಕರ್ತವ್ಯದಲ್ಲಿರುತ್ತಾರೆಂದು ಸ್ಪಷ್ಟವಾಗಿ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಪ್ರಾಸಾ-5 ರವರು ಸದರಿ ಸಮಯಕ್ಕೆ ಕರ್ತವ್ಯದಲ್ಲಿ ಇದ್ದರೂ ಎಂದು ತೋರಿಸಲು ನಿಪಿ-5 ರಿಂದ 7 ರಂತೆ ಮಾನ್ಯ ಜಿಲ್ಲಾಧಿಕಾರಿಗಳು ರಾಯಾಚೂರು ರವರು ನೀಡಿರುವ ದೃಢಿಕರಣ ಪತ್ರ ಕರ್ತವ್ಯಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುತ್ತಾರೆ. ಭಾ.ದ.ಸಂ ಕಲಂ 353 ಪ್ರಕಾರ ಈ ಕೆಳಗಿನಂತಿರುತ್ತದೆಃ

**353. Assault or criminal force to deter public servant from discharge of his duty.**

> Whoever assaults or uses criminal force to any person being a public servant in the execution of his duty as such public servant, or with intent to prevent or deter that person from discharging his duty as such public servant, or in consequence of anything done or attempted to be done by such person in the lawful discharge of his duty as such public servant, shall be

punished with imprisonment of either description for a term which may extend to two years, or with fine, or with both.

**30.** ಮೇಲ್ಕಂಡ ಕಲಂಗಳ ಅನ್ವಯ ಪ್ರಾಸಾ-5 ರವರು ಕೃತ್ಯ ನಡೆದ ಕಾಲಕ್ಕೆ ಸರ್ಕಾರಿ ಕರ್ತವ್ಯಕ್ಕೆ ಹಾಜರಿದ್ದರು ಎಂದು ತೋರಿಸಲು ನಿಪಿ-5 ರಿಂದ 7 ರಂತೆ ಮಾನ್ಯ ಜಿಲ್ಲಾಧಿಕಾರಿಗಳು ರಾಯಾಚೂರು ರವರು ನೀಡಿರುವ ದೃಢೀಕರಣ ಪತ್ರ ದಾಖಲೆಯನ್ನು ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿರುತ್ತಾರೆ ಹಾಗೂ ಈ ಕುರಿತು ಪ್ರಾಸಾ-5 ರಿಂದ 8, 11 ಮತ್ತು 12 ರವರು ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ನುಡಿದಿರುವುದಿಲ್ಲ. ಘಟನೆ ನಡೆಯುವ ಕಾಲಕ್ಕೆ ರಾತ್ರಿ 7-45 ಗಂಟಗೆ ಪ್ರಾಸಾ-5 ರವರು ಗಸ್ತು ಕರ್ತವ್ಯದಲ್ಲಿದ್ದಾಗ ನಡೆದಿರುವುದರಿಂದ ಪ್ರಾಸಾ-5 ರವರು ಸರ್ಕಾರಿ ಕರ್ತವ್ಯದಲ್ಲಿ ಇದ್ದರು ಎಂದು ಕಂಡು ಬಂದಿರುವುದಿಲ್ಲ. ಆ ಕಾರಣ ಆರೋಪಿತರು ಸದರಿ ಕೃತ್ಯದಲ್ಲಿ ಪ್ರಾಸಾ-5 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆಂದು ಅಂಶಗಳು ಕಂಡು ಬಂದಿರುವುದಿಲ್ಲ. ಆ ಕಾರಣ ಅಭಿಯೋಜನೆಯವರು ಭಾ.ದ.ಸಂ ಕಲಂ 353 ರ ಅಂಶಗಳನ್ನು ಸಾಭೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

**31.** ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-3 ಮತ್ತು 6 ರವರು ಪೋಲಿಸ್ ಸಿಬ್ಬಂದಿಗಳಾಗಿದ್ದು, ಪ್ರಾಸಾ-7 ರವರ ಅಧೀನದಲ್ಲಿ ಕೆಲಸ ಮಾಡಿಕೊಂಡಿದ್ದು, ಇವರ ಸಾಕ್ಷ್ಯವನ್ನು ನಂಬಲು ಬರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ. ಆದರೆ ಸಾಕ್ಷಿದಾರರಾದ ಪ್ರಾಸಾ-4 ಮತ್ತು 5 ರವರು ತಹಶೀಲ್ದಾರ್ ದೇವದುರ್ಗ ಕಾರ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಸಾಕ್ಷಿದಾರರು ಸರ್ಕಾರಿ ನೌಕರರಾಗಿದ್ದು ಪೊಲೀಸ್ ಅಧಿಕಾರಿಗಳಾಗಿರುವುದಿಲ್ಲ. ಪ್ರಾಸಾ-3 ಮತ್ತು 6 ರವರು ಪೋಲಿಸ್ ಸಿಬ್ಬಂದಿಗಳಾಗಿದ್ದು, ಘಟನೆ ನಡೆಯುವ ಕಾಲಕ್ಕೆ ಪ್ರಾಸಾ-3 ರಿಂದ 7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ಹಾಜರಿದ್ದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಆದರೇ ಪ್ರಾಸಾ-5 ರವರು ಪಾಟೀ ಸವಾಲಿನಲ್ಲಿ "ತಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಚಾಸಾ-1, 4, 7 ಮತ್ತು 8 ರವರು ಇದ್ದರೂ ಬೇರೆ ಯಾರು ಇರಲಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುತ್ತಾನೆ. ಅದೇ ರೀತಿ ಪ್ರಾಸಾ-4 ರವರು ತಮ್ಮ ಪಾಟೀ ಸವಾಲಿನಲ್ಲಿ ನಾವು ಸ್ಥಳಕ್ಕೆ ಹೋದಾಗ ಸಂಜೆ 07-45 ಗಂಟೆಯಾಗಿತ್ತು. ಆ ಸಮಯದಲ್ಲಿ ಸ್ಥಳದಲ್ಲಿ 4-5 ಜನರು ಇದ್ದರು. ಆ 4-5 ಜನರ ಹೆಸರು ನನಗೆ ಹೇಳಲು ಬರುವುದಿಲ್ಲ.

ಆ 4-5 ಜನರು ಪೂಜೆ ಮಾಡಲುಉ ಬಂದಿದ್ದಾರೆಯೋ ಅಥವಾ ಗಣೇಶ ಸಮಿತಿಯ ಸದಸ್ಯರೋ ನನಗೆ ಗೊತ್ತಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ಪ್ರಕರಣದ ದೂರುದಾರರಾದ ಪ್ರಾಸಾ-5 ರವರು ಘಟನೆಯು ರಾತ್ರಿ 7-45 ರಿಂದ ಸುಮಾರು 15 ನಿಮಿಷಗಳವರೆಗೆ ಆಗಿರುತ್ತದೆ. ನಾನು ದೂರವಾಣಿ ಕರೆ ಮಾಡಿದ ಮೇಲೆ ಅಲ್ಲಿ ಸಂತೋಷ ಹೆಚ್.ಸಿ. ಮತ್ತು ಪಿ.ಎಸ್.ಐ ರಂಗಯ್ಯ ರವರು ಬಂದಿರುತ್ತಾರೆ. ದೂರಿನಲ್ಲಿ ಪಿ.ಎಸ್.ಐ ರವರು ಸ್ಥಳಕ್ಕೆ ಬಂದಿದ್ದರು ಎಂದು ಹೇಳಿರುತ್ತೇನೆ. ನಾನು ದೂರುವಾಣಿ ಕರೆ ಮಾಡಿದ ಫೋನ್ ಸ್ಮಾರ್ಟ್ ಫೋನ್ ಆಗಿರುತ್ತದೆ. ಸ್ಥಳದಲ್ಲಿ ಗಣೇಶ ವಿಗ್ರಹ ಇಟ್ಟಿರುವುದನ್ನು ಮತ್ತು ಜನರು ಸೇರಿರವುದನ್ನು ಮೊಬೈಲ್ ನಿಂದ ವಿಡಿಯೋ ಮಾಡಿರುವುದಿಲ್ಲ ಎಂದು ವ್ಯತ್ಯಾಸವಾಗಿ ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ-7 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಸ್ಥಳಕ್ಕೆ ಪಂಚನಾಮೆ ಮಾಡಲು ಹೋಗಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಘಟನೆ ನಡೆಯುವ ಕಾಲಕ್ಕೆ ಪ್ರಾಸಾ-7 ರವರು ಸ್ಥಳದಲ್ಲಿ ಇದ್ದರು ಎಂದು ಕಂಡುಬಂದಿರುವುದಿಲ್ಲ".

**32.** ದೂರನ್ನು ತಡವಾಗಿ ದಾಖಲಿಸಿರುವ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ಈ ಕುರಿತು ಮಾನ್ಯ ಗೌ॥ ಸರ್ವೋಚ್ಚ ನ್ಯಾಯಾಲಯದ ನೀಡಿರುವ ತೀರ್ಪು ಕೆಳಕಂಡಂತೆ ಇದೆ:-

***Delay in lodging in FIR without any explanation.***

***In S<u>atpal Singh v. State of Haryana, (2010) 8 SCC 714 the Supreme Court has observed:</u>***

> *"15. This Court has consistently highlighted the reasons, objects and means of prompt lodging of FIR. Delay in lodging FIR more often than not, results in embellishment and exaggeration, which is a creature of an afterthought. A delayed report not only gets bereft of the advantage of spontaneity, the danger of the introduction of a result of deliberations and consultation, also creeps in, casting a serious doubt on its veracity. Thus, FIR is to be filed more promptly and if there is any delay, the prosecution must furnish a satisfactory explanation for the same of the reason that in case the substratum of the evidence given by the complainant/informant is found to be unreliable, the prosecution case has to be rejected in its entirety. [Vide: State of Andhra Pradesh v. M. Madhusudhan Rao (2008) 15 SCC 582]"*

***<u>The Hon'ble Supreme Court in Kishan Singh Vs. Gurpal Singh, (2010) 8 SCC 775 with regard to the effect of delay in lodging FIR has held as under</u>:***

*"22. In cases where there is a delay in lodging a FIR, the Court has to look for a plausible explanation for such delay. In absence of such an explanation, the delay may be fatal. The reason for quashing such proceedings may not be merely that the allegations were an after thought or had given a colored version of events. In such cases the court should carefully examine the facts before it for the reason that a frustrated litigant who failed to succeed before the Civil Court may initiate criminal proceedings just to harass the other side with malafide intentions or the ulterior motive of wreaking vengeance on the other party. Chagrined and frustrated litigants should not be permitted to give vent to their frustrations by cheaply invoking the jurisdiction of the criminal court. The court proceedings ought not to be permitted to degenerate into a weapon of harassment and persecution. In such a case, where an FIR is lodged clearly with a view to spite the other party because of a private and personal grudge and to enmesh the other party in long and arduous criminal proceedings, the court may take a view that it amounts to an abuse of the process of law in the facts and circumstances of the case. (vide :Chandrapal Singh &Ors. Vs. Maharaj Singh &Anr., AIR 1982 SC 1238; State of Haryana &Ors. Vs. Ch. Bhajan Lal &Ors., AIR 1992 SC 604; G. Sagar Suri &Anr. Vs. State of U.P. &Ors., AIR 2000 SC 754; and Gorige Pentaiah Vs. State of A.P. &Ors., (2008) 12 SCC 531).*

***<u>In Jai Prakash Singh Vs. State of Bihar, (2012) 4 SCC 379, Hon'ble Supreme Court has held that extraordinary delay in lodging of FIR raises grave doubt regarding the truthfulness of allegations. The Hon'ble Court held as under:</u>***

*"12. The FIR in a criminal case is a vital and valuable piece of evidence though may not be substantive piece of evidence. The object of insisting upon prompt lodging of the FIR in respect of the commission of an offence is to obtain early information regarding the circumstances in which the crime was committed, the names of actual culprits and the part played by them as well as the names of eye- witnesses present at the scene of occurrence. If there is a delay in lodging the*

> *FIR, it looses the advantage of spontaneity, danger creeps in of the introduction of coloured version, exaggerated account or concocted story as a result of large number of consultations/deliberations. Undoubtedly, the promptness in lodging the FIR is an assurance regarding truth of the informant's version. A promptly lodged FIR reflects the first hand account of what has actually happened, and who was responsible for the offence in question."*

*Relying upon the judgment of Jai Prakash Singh (supra), in Manoj Kumar Sharma and others Vs. State of Chhattisgarh and another, (2016) 9 SCC 1, Hon'ble Supreme Court has held that delay in lodging FIR often results in embellishment, which is a creature of an afterthought and on account of delay, FIR not only gets bereft of advantage of spontaneity, danger of coloured version or exaggerated story being introduced in FIR, creeps in. It further held that extraordinary delay in lodging FIR raises grave doubt about the truthfulness of allegations made therein. The material contradictions in the testimony of witness.*

ಮೇಲ್ಕಂಡ ತೀರ್ಪುಗಳು ಸದರಿ ಪ್ರಕರಣಕ್ಕೆ ಅನ್ವಯವಾಗುತ್ತವೆ. ಆದ್ದರಿಂದ ಇವುಗಳನ್ನು ಪರಿಗಣಿಸಲಾಗಿದೆ. ದೂರನ್ನು ಘಟನೆ ನಡೆದ ನಂತರ ಒಂದು ದಿನ ತಡವಾಗಿ ನೀಡಿರುವುದರ ಬಗ್ಗೆ ಯಾವುದೇ ಸಕಾರಣಗಳನ್ನು ತಿಳಿಸದೆ ಇರುವುದರಿಂದ ದೂರಿನ ಅಂಶಗಳ ಬಗ್ಗೆ ಸಂಶಯಕ್ಕೆ ಆಸ್ಪದಾ ಮಾಡಿಕೊಟ್ಟಿರುತ್ತದೆ. ಇದರ ಲಾಭವನ್ನು ಆರೋಪಿತರು ಪಡೆಯಲು ಅರ್ಹರಿರುತ್ತಾರೆ.

**33.** ಈ ಎಲ್ಲಾ ಕಾರಣಗಳಿಂದ ಪ್ರಕರಣದಲ್ಲಿ ಆರೋಪಿತರ ಮೇಲೆ ಹೊರಿಸಿದ್ದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಸರ್ಕಾರಿ ಅಭಿಯೋಜಕರು ವಿಚಾರಿಸಿದಂತಹ ಸಾಕ್ಷಿದಾರರಾದ ಆದ್ದರಿಂದ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 353, 504, 506 ರಡಿಯಲ್ಲಿ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ ಮೇಲ್ಕಂಡ ಅಂಶಗಳನ್ನು ನಕರಾತ್ಮಕವಾಗಿ ಉತ್ತರಿಸುತ್ತೇನೆ.

**34.** **ಅಂಶ ನಂ : 4 :** ಮೇಲ್ಕಂಡ ಅಂಶಗಳ ಮೇಲೆ ಈ ನ್ಯಾಯಾಲಯವು ಮಾಡಿರುವ ನಿರ್ಣಯದ ಹಿನ್ನಲೆಯಲ್ಲಿ ಈ ಕೆಳಕಂಡಕಂತೆ ಆದೇಶವನ್ನು ಮಾಡಿರುತ್ತದೆ.

**ಃ ಆದೇಶ ಃ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರ ಮತ್ತು ಬಿ.ಎನ್ ಎಸ್.ಎಸ್ ಕಾಯ್ದೆ ಕಲಂ 278(1) ರ ಅಡಿಯಲ್ಲಿ ಈ ನ್ಯಾಯಾಲಯಕ್ಕೆ ಇರುವ ಪ್ರದತ್ತವಾದ ಅಧಿಕಾರದ ಅನ್ವಯ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 353, 186, 269 ಸಹವಾಚಕ 34 ರ ಅಪರಾದಕ್ಕೆ ನಿರ್ದೋಷಿಗಳೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರ ಮುಚ್ಚಳಿಕೆಯನ್ನು ಈ ಮೂಲಕ ರದ್ದುಗೊಳಿಸಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437 ಎ ರಡಿಯಲ್ಲಿ ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು 6 ತಿಂಗಳ ಕಾಲ ಅಸ್ತಿತ್ವದಲ್ಲಿರುತ್ತದೆ.

ದೋಷಾರೋಪಣಾ ಪತ್ರದೊಂದಿಗೆ ಸ್ವತ್ತು ಪಟ್ಟಿ ಸಂಖ್ಯೆ 94/1/2020 ರಲ್ಲಿ ದಿಃ25-08-2020 ರಲ್ಲಿ ನಮೂದಿಸಿರುವ ಎರಡು ದೊಡ್ಡ ಸ್ಪೀಕರ್ ಬಾಕ್ಸ್ ಗಳನ್ನು ಮಾಲೀಕರಿಗೆ ಬಿಡುಗಡೆ ಮಾಡಲಾಗಿದೆ.

**(ಈ ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ಉಕ್ತಲೇಖನ ಕೊಟ್ಟು ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ ಸಹಿ ಮಾಡಿ ದಿನಾಂಕಃ 18 ನೇ ಜೂನ್-2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)**

ಸಹಿ/-
(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

**ಃ ಅನುಬಂಧ ಃ**

1. **ಅಭಿಯೋಜನೆಯ ಪರ ವಿಚಾರಣೆ ಮಾಡಿಕೊಂಡ ಸಾಕ್ಷಿದಾರರ ವಿವರಃ**

ಪ್ರಾಸಾ-1 – ವಿರೇಶ ಬಾಬು.

ಪ್ರಾಸಾ-2 - ದಂಡಪ್ಪ.

ಪ್ರಾಸಾ-3 - ಸಂತೋಷ.

ಪ್ರಾಸಾ-4 - ಪ್ರಕಾಶಗೌಡ.

ಪ್ರಾಸಾ-5 - ಸತೋಷರಾಣಿ.

ಪ್ರಾಸಾ-6 - ವಿರೇಶ.

ಪ್ರಾಸಾ-7 - ರಂಗಯ್ಯ.

ಪ್ರಾಸಾ-8 – ಬಶೀರ್ ಅಹ್ಮದ್.

**2. ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ವಿವರಃ**

ನಿ.ಪಿ-1 : ಪಂಚನಾಮೆ.

ನಿ.ಪಿ-1(ಎ) : ಪ್ರಾಸಾ-1 ರವರ ಸಹಿ.
ನಿ.ಪಿ-1(ಬಿ) : ಪ್ರಾಸಾ-2 ರವರ ಸಹಿ.
ನಿ.ಪಿ-1(ಸಿ) : ಪ್ರಾಸಾ-7 ರವರ ಸಹಿ.
ನಿ.ಪಿ-2 : ದೂರು.

ನಿ.ಪಿ-2(ಎ) : ಪ್ರಾಸಾ-4 ರವರ ಸಹಿ.
ನಿ.ಪಿ-2(ಬಿ) : ಪ್ರಾಸಾ-5 ರವರ ಸಹಿ.
ನಿ.ಪಿ-3 : ಪ್ರಥಮ ವರ್ತಮಾನ ವರದಿ.

ನಿ.ಪಿ-3(ಎ) : ಪ್ರಾಸಾ-4 ರವರ ಸಹಿ.
ನಿ.ಪಿ-4 : ಸ್ವತ್ತಿನ ಪಟ್ಟಿ.

ನಿ.ಪಿ-4(ಎ) : ಪ್ರಾಸಾ-4 ರವರ ಸಹಿ.
ನಿ.ಪಿ-4(ಬಿ) : ಪ್ರಾಸಾ-8 ರವರ ಸಹಿ.
ನಿ.ಪಿ-5 ರಿಂದ 7 : ಕರ್ತವ್ಯ ಪ್ರಮಾಣ ಪತ್ರ.

ನಿ.ಪಿ-5(ಎ) ರಿಂದ 7(ಎ) : ಪ್ರಾಸಾ-4 ರವರ ಸಹಿ.
ನಿ.ಪಿ-8 : ನಿರೀಕ್ಷಕಣ ಜಾಮಿನು ಆದೇಶ.

ನಿ.ಪಿ-9 : ಸಾಕ್ಷಿ ಅಲ್ಲೆಗಳೇದ ಹೇಳಿಕೆ.

**3. ಆರೋಪಿತರ ಪರ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ ಃ**
ಇಲ್ಲಾ

**4. ಆರೋಪಿತರ ಪರ ಗುರುತಿಸಿಕೊಂಡ ದಾಖಲೆಗಳ ವಿವರ ಃ**
ಇಲ್ಲಾ

**5. ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲಿನ ವಿವರ ಃ**

ಎರಡು ದೊಡ್ಡ ಸ್ಪಿಕರ್ ಗಳು.

ಸಹಿ/-
(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.